


ಕಲಾಶ್ರೀ ವೀರೂಪಾಕ್ಷಯ್ಯ ಗೋರಟಾ





ಲೇಖಕರು :
ಮಾಣಿಕ ಆರ್. ಭುರೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.
Email : kasapabidar@gmail.com - www.kasapabidar.in



ಶ್ರೀ ಮಾಣಿಕ ಆರ್.ಭುರೆ



ಪತ್ರಕರ್ತರಾಗಿ ಸೃಜನಶೀಲ ಸಾಹಿತಿಯಾಗಿ, ಮಾನವೀಯ ಸಂವೇದನೆಯುಳ್ಳ ಶ್ರೀ ಮಾಣಿಕ ಆರ್. ಭುರೆಯವರದ್ದು ಅಪರೂಪದ ವ್ಯಕ್ತಿತ್ವ. ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಬಟಗೇರಾ ಗ್ರಾಮದ ರಾಮ ಭುರೆ ಹಾಗೂ ಸಂಪತಾಬಾಯಿ ಅವರ ಮಗನಾಗಿ ಇವರು ೧೯೬೩ ರಲ್ಲಿ ಜನ್ಮಪಡೆದ ಇವರು ಬಿ.ಎ ಪದವೀಧರರು.

ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ೩ ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟವಾದ 'ಚೊಚ್ಚಿಲು' (೧೯೯೧) ಕವನ ಸಂಕಲನ, ಬಸವಕಲ್ಯಾಣ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟವಾದ 'ಕಲ್ಯಾಣ ದರ್ಪಣ' (೧೯೯೩) ಸ್ಮರಣ ಸಂಚಿಕೆಯಲ್ಲಿ ಇವರ ಕವಿತೆಗಳು ಪ್ರಕಟವಾಗಿದ್ದೆ ಇವರು ಸಾಹಿತ್ಯ ಕೃಷಿಯಲ್ಲಿ ಮುನ್ನಡೆಸಲು ಪ್ರೇರಣೆ ದೊರೆತು. ೮ ಪುಸ್ತಕಗಳನ್ನು ಬರೆಯಲು ನೆರವಾಯಿತು. 'ಚಾಲುಕ್ಯ ನಾಡು', 'ದಲಿತ ಪೀಠಾಧಿಪತಿ', 'ಅನುಭವ ಮಂಟಪ ಪ್ರಶಸ್ತಿ ಪುರಸ್ಕೃತರು', 'ಹುಲಸೂರ ತಾಲ್ಲೂಕು ದರ್ಶನ' ಮೊದಲಾದ ಕೃತಿಗಳನ್ನು ರಚಿಸಿದ್ದಲ್ಲದೆ ಹಾರಕೂಡ ಡಾ.ಚನ್ನವೀರ ಶಿವಾಚಾರ್ಯರ ೫೭ ನೇ ಜನ್ಮದಿನಾಚರಣೆಯಲ್ಲಿ ಹೊರತರಲಾದ 'ನುಡಿಚೆನ್ನ' (೨೦೧೯) ಅಭಿನಂದನಾ ಗ್ರಂಥ, 'ಶರಣ ಸಂಸ್ಕೃತಿ ದರ್ಶನ' ಮೊದಲಾದ ಕೃತಿಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ವಿವಿಧ ಸ್ಮರಣ ಸಂಚಿಕೆ, ಅಭಿನಂದನಾ ಗ್ರಂಥಗಳಲ್ಲಿ ಅನೇಕ ಲೇಖನಗಳು, ಕವನಗಳು ಪ್ರಕಟವಾಗಿವೆ.

ವೃತ್ತಿಯಿಂದ ಪತ್ರಕರ್ತರಾಗಿ ಕಾಲೇಜು ದಿನಗಳಿಂದಲೆ ಆರಂಭಿಸಿ 'ಉತ್ತರ ಕರ್ನಾಟಕ' (೧೯೯೩) 'ಬಹಿರಂಗ ಸುದ್ದಿ' 'ಜನಬೆಂಬಲ' (೧೯೯೫) 'ಬಿಸಿಲ ಬದುಕು' (೧೯೯೬) ಮೊದಲಾದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿ ೧೯೯೭ ರಿಂದ 'ಪ್ರಜಾವಾಣಿ'ಯಲ್ಲಿ ಬಸವಕಲ್ಯಾಣ ತಾಲ್ಲೂಕು ವರದಿಗಾರರಾಗಿ ಕಾರ್ಯನಿರತರಾಗಿದ್ದು ಪ್ರಜಾವಾಣಿಯಲ್ಲಿನ ಶರಣ ಸ್ಮಾರಕಗಳ ಸರಣಿ ಲೇಖನಗಳು, 'ಸಂಗತ' ಹೆಚ್ಚು ಜನಪ್ರಿಯವಾಗಿವೆ. ಚಿತ್ರಕಲಾವಿದರಲ್ಲದಿದ್ದರೂ ಕಂಪ್ಯೂಟರ್ ಗ್ರಾಫಿಕ್ ಕಲೆ ಕರಗತ ಮಾಡಿಕೊಂಡು ಹಲವು ಪುಸ್ತಕಗಳ ಮುಖಪುಟ ರಚಿಸಿದ ಬಹುಮುಖ ಪ್ರತಿಭೆಯುಳ್ಳವರಾಗಿದ್ದಾರೆ. ತಾಲ್ಲೂಕು ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಪ್ರಥಮ ತಾಲ್ಲೂಕು ಜಾನಪದ ಸಮ್ಮೇಳನ ಹಾಗೂ ೩ ರಾಷ್ಟ್ರೀಯ ಜಾನಪದ ಉತ್ಸವಗಳನ್ನು ಆಯೋಜಿಸಿದ್ದು, ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರತಿನಿಧಿ ಹಾಗೂ ತಾಲ್ಲೂಕು ಕಾರ್ಯದರ್ಶಿ, ಗಡಿನಾಡು ಪ್ರತಿನಿಧಿಗಳಾಗಿ ಹಲವಾರು ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿರುವರು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಇವರ 'ದಲಿತ ಪೀಠಾಧಿಪತಿ' (೨೦೧೦) ಕೃತಿಗೆ ಜಿ.ಆರ್.ರೇವಯ್ಯ ದತ್ತಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ, ಗೌರವ ಸನ್ಮಾನಗಳಿಗೂ ಭಾಜನರಾಗಿದ್ದಾರೆ. ಇತಿಹಾಸ ಲೇಖನ ಹಾಗೂ ಸಂಶೋಧನೆ ಇವರ ಆಸಕ್ತಿಯ ವಿಷಯಗಳಾಗಿದ್ದು ಇದೀಗ 'ಕಲಾಶ್ರೀ ವೀರೂಪಾಕ್ಷಯ್ಯ ಗೋರಟಾ' ಕೃತಿ ಪ್ರಕಟವಾಗುತ್ತಿದ್ದು ಇವರಿಂದ ಇನ್ನೂ ಹೆಚ್ಚಿನ ಕೃತಿಗಳು ಹೊರಬರಬರಲೆಂದು ಶುಭ ಹಾರೈಸಲಾಗುತ್ತಿದೆ.

ಡಾ. ಬಸವರಾಜ ಬಲ್ಲೂರ
ಬೀದರ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಕನ್ನಡ ಕಟ್ಟಿದವರು ಮಾಲಿಕೆ

ಕಲಾಶ್ರೀ

ವಿರೂಪಾಕ್ಷಯ್ಯ ಗೋರಟಾ

ಲೇಖಕರು

ಮಾಣಿಕ ಆರ್.ಭುರೆ

ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

೨೦೨೦

ಕಲಾಶ್ರೀ ವಿರೂಪಾಕ್ಷಯ್ಯ ಗೋರಟಾ
ಮಾಣಿಕ ಆರ್.ಭುರೆ, ಬಸವಕಲ್ಯಾಣ. ಮೊ: 9845429001
ಪ್ರಕಾಶಕರು : ಸುರೇಶ ಚನಶೆಟ್ಟಿ,
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: 9986792323
E-mail:kasapabidar@gmail.com, web: www.kasapabidar.in

ಪ್ರಥಮ ಮುದ್ರಣ : 2020
ಹಕ್ಕುಗಳು : ಪ್ರಕಾಶಕರದ್ದು
ಪುಟಗಳು : 52
ಬೆಲೆ : 50/-
ಅಕ್ಷರ ಜೋಡಣೆ : ಪಾಟೀಲ ಕಂಪ್ಯೂಟರ್, ಬೀದರ.
ಪುಸ್ತಕ ವಿನ್ಯಾಸ : ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ : ಅಕ್ಷಯ ಗ್ರಾಫಿಕ್ಸ್, ಬೀದರ.
ಮುದ್ರಕರು : ವಿಶ್ವಾಸ ಪ್ರೆಸ್ ಬೆಂಗಳೂರು.

ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. –ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಡಾ. ಮಹಮದ್ ಗುಲ್ಷನ್

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಸಂಚಾಲಕರು
ಶಿವಶಂಕರ ಟೋಕರೆ

ಅಧ್ಯಕ್ಷರು
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ, ಹುಮನಾಬಾದ
ಡಾ. ರುದ್ರಮಣಿ ಮಠಪತಿ,
ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಗೌರವ ಸಲಹೆಗಾರರು
ಡಾ. ಬಸವರಾಜ ಪಾಟೀಲ ಅಷ್ಟೂರ
ಬಿ. ಜಿ. ಶಟಕಾರ
ಪ್ರಭುರಾವ ವಸಮತೆ
ಗುರುನಾಥ ಕೊಳ್ಳೂರ
ಬಾಬು ವಾಲಿ
ರೇವಣಸಿದ್ಧಪ್ಪ ಜಲಾದೆ
ರಮೇಶ್ ಮಠಪತಿ
ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಡಾ.ಜಗನ್ನಾಥ ಹೆಬ್ಬಾಳೆ
ಶಂಭುಲಿಂಗ ಕಾಮಣ್ಣಾ

ಕಾಶೀನಾಥ ಬೆಲ್ದಾಳೆ
ಶೀನಶೇಖರ ಪಾಟೀಲ
ಕುಶಾಲರಾವ ಪಾಟೀಲ ಖಾಜಾಪುರ
ರಾಜಕುಮಾರ ಪಾಟೀಲ ಬಗದಲ್
ಶಿವಕುಮಾರಸ್ವಾಮಿ
ಎಸ್.ಎಮ್. ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ
ಝಾಕೀರ ಹುಸೇನ್

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ. ಸಿ. ಆನಂದರಾವ
ಬಾಲಾಜಿ ಬಿರಾದಾರ
ಹಣಮಂತಪ್ಪ ಮೈಲಾರೆ
ಓಂಕಾಂತ ಸುರ್ಯವಂಶಿ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ ಮಾಲಿಪಾಟೀಲ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಅಶೋಕ್ ದೀಡಿಗೆ
ಸಿದ್ಧರೂಢ ಭಾಲ್ಕೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು

ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ನಾಯಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ

(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯು ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ಶ್ರೀ ಮಾಣಿಕ ಆರ್. ಭುರೆ ಬರೆದ ಕಲಾಶ್ರೀ **ವಿರೂಪಾಕ್ಷಯ್ಯ ಗೋರಟಾ** ಪುಸ್ತಕವು **ಶ್ರೀ ವಿರೂಪಾಕ್ಷಯ್ಯ ಗೋರಟಾ** ಅವರ ಜೀವನ ಸಾಧನೆಯಾಗಿದ್ದು ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಕಲಾವಿದರಾದ ಶ್ರೀ ವಿರೂಪಾಕ್ಷಯ್ಯ ಗೋರಟಾ ಅನೇಕ ಮೌಲಿಕ ಕೃತಿಗಳನ್ನು ಬರೆದಿದ್ದಾರೆ. ಕಲೆ ಸಾಹಿತ್ಯಕ್ಕೆ ಉದಾರ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಅವರ ಜೀವನ ಸಾಧನೆ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜಡಾ. ಮನು ಬಳಿಗಾರ ಅವರಿಗೆ ತುಂಬು ಹೃದಯದಿಂದ ನೆನೆಯುತ್ತೇವೆ.

ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಶ್ರೀ ವಿರೂಪಾಕ್ಷಯ್ಯ ಗೋರಟಾ** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಕನ್ನಡ ಕಟ್ಟಿದವರು

ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಫೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತ್ತಲ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಳು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ

ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ
ಪ್ರಕಟಣೆ ಸಮಿತಿಯ ಪರವಾಗಿ

ಸದಭಿಪ್ರಾಯ

ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿಯವರು ಸಂಗೀತ ವಿದ್ವಾಂಸರು. ಸಾಹಿತಿಗಳು, ಪುರಾಣ ಹಾಗೂ ನಾಟಕ ರಚನಾಕಾರರು, ಪ್ರವಚನಕಾರರು. ಪಿಟೀಲು ವಾದಕರು, ಭಕ್ತಿಗೀತೆ, ಜಾನಪದಗೀತೆ ರಚನಾಕಾರರು, ಸಂಗೀತದೊಂದಿಗೆ ರುದ್ರಪೂಜೆಗೈಯುತ್ತಾರೆ. ಹೀಗೆ ಬಹುಮುಖ ಪ್ರತಿಭೆಯ ಖಣಿ ಆಗಿದ್ದಾರೆ. ಅವರ ಕುರಿತಾದ ಈ ಪುಸ್ತಕ ಉತ್ತಮವಾಗಿ ಮೂಡಿ ಬಂದಿದೆ. ಪ್ರೇರಣೆ ನೀಡುವಂತಿದೆ.

ಗೋರಟಾ(ಬಿ) ಎಂದರೆ, ರಜಾಕಾರರಿಂದ ನಡೆದ ಹತ್ಯಾಕಾಂಡ ಕಣ್ಣೆದುರಿಗೆ ಬರುತ್ತದೆ. ವಿರೂಪಾಕ್ಷಯ್ಯನವರು ಇದೇ ಊರಿನವರಾಗಿದ್ದು ರಜಾಕಾರರಿಂದ ನಡೆದ ದಬ್ಬಾಳಿಕೆಯ ಬಗ್ಗೆ ತನ್ನ 'ಭುಲಾಯಿ ಪದ' ಪುಸ್ತಕದಲ್ಲಿ ಹಾಗೂ 'ಜಲಿಯನವಾಲಾ ಬಾಗ ಹತ್ಯಾಕಾಂಡ ಗೋರಟಾ' ಗ್ರಂಥದಲ್ಲಿ ವಿಸ್ತ್ರುತವಾಗಿ ಚಿತ್ರಿಸಿದ್ದಾರೆ. ಆ ಪದ್ಯ ಕೂಡ ಈ ಗ್ರಂಥದಲ್ಲಿ ಸಂದರ್ಭಕ್ಕೆ ಅನುಸಾರವಾಗಿ ಬಳಸಿಕೊಳ್ಳಲಾಗಿದೆ. ಗ್ರಾಮದ ಐತಿಹಾಸಿಕ ಮಹತ್ವ ಹಾಗೂ ಇವರ ಇತರೆ ಗ್ರಂಥಗಳ ಕುರಿತಾಗಿಯೂ ಮಾಹಿತಿ ಇದೆ.

೯೩ ವಯಸ್ಸಿನವರಾದ ವಿರೂಪಾಕ್ಷಯ್ಯನವರ ಸಾಧನೆ ದೊಡ್ಡದು. ಇಂಥ ಕಿರು ಪುಸ್ತಕದಲ್ಲಿ ಅದೆಲ್ಲವನ್ನು ಹಿಡಿದಿಡುವುದು ಅಸಾಧ್ಯವಾದುದು. ಆದರೂ, ಲೇಖಕರಾದ ಮಾಣಿಕ ಆರ್.ಭುರೆ ಅವರು ಅವರ ಬಾಲ್ಯ, ತಂದೆ ತಾಯಿಯಿಂದಾದ ಪ್ರಭಾವ, ಸಂಗೀತ ಕಲಿತ ಬಗೆ, ನಾಟಕ ರಚನಾಕಾರರು, ನಿರ್ದೇಶಕ, ನಟರಾಗಿ ಊರನ್ನು ನಾಟಕದ ಊರನ್ನಾಗಿ ಪರಿವರ್ತಿಸಿದ ಕುರಿತಾಗಿ ಇಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಿರೂಪಿಸಿದ್ದಾರೆ.

ಅವರ ಕುಟುಂಬದ ವಿವರವೂ ಇಲ್ಲಿದೆ. ಸಂಗೀತಗಾರರ ಕುರಿತಾಗಿ ಕೆಲವರ ಅಭಿಪ್ರಾಯ ನೀಡಿರುವುದರಿಂದಲೂ ಪುಸ್ತಕ ವೈಶಿಷ್ಟ್ಯಪೂರ್ಣವಾಗಿದೆ.

ಮಾಣಿಕ ಆರ್. ಭುರೆಯವರು ಪತ್ರಕರ್ತರಾಗಿದ್ದಾರೆ. ಇದಲ್ಲದೆ ಕೆಲ ಪುಸ್ತಕಗಳನ್ನು ಬರೆದು ಸಾಹಿತ್ಯಲೋಕದಲ್ಲಿ ಗುರುತಿಸಿಕೊಂಡಿದ್ದಾರೆ. ಹೀಗಾಗಿ ಈ ಪುಸ್ತಕದಲ್ಲಿ ಮಹತ್ವದ ಸಂಗತಿಗಳನ್ನು ಕಲೆಹಾಕುವಲ್ಲಿ ಯಶಸ್ವಿ ಆಗಿದ್ದಾರೆ. ಇವರು ಪತ್ರಿಕೆಯಲ್ಲಿ ಹಾಗೂ ವಿವಿಧ ಸ್ಮರಣ ಸಂಚಿಕೆ, ಇತರೆ ಗ್ರಂಥಗಳಲ್ಲಿ ವ್ಯಕ್ತಿಚಿತ್ರಗಳನ್ನು ಬರೆದಿರುವ ಕಾರಣ ಇಲ್ಲಿ ವಿರೂಪಾಕ್ಷಯ್ಯನವರ ಜೀವನ ಚಿತ್ರಣ ಮಾಡುವುದು ಅವರಿಗೆ ಸಲೀಸಾಗಿ ಸಾಧ್ಯವಾಗಿದೆ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೭ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಈ ಕೃತಿ ಪ್ರಕಟಿಸುತ್ತಿರುವುದು ಹೆಮ್ಮೆಯ ಸಂಗತಿ.

ಡಾ.ಶಿವಾಜಿ ಮೇತ್ರೆ ಗಡಿಗೌಡಗಾಂವ

ಕನ್ನಡ ಉಪನ್ಯಾಸಕ, ಎನ್.ವಿ ಕಾಲೇಜ್

ಕಲಬುರ್ಗಿ

ಲೇಖಕರ ನುಡಿ

ಕಲ್ಯಾಣವು ಒಂದು ಕಾಲದಲ್ಲಿ ಸಂಗೀತ ಹಾಗೂ ಸಾಹಿತ್ಯಕ್ಕೆ ಪ್ರಸಿದ್ಧಿ ಪಡೆದ ಸ್ಥಳವಾಗಿತ್ತು. ಇದನ್ನು ರಾಜಧಾನಿಯನ್ನಾಗಿಸಿ ಆಳ್ವಿಕೆ ನಡೆಸಿದ ರಾಜರುಗಳು ಸಂಗೀತ ಸಾಧಕರಿಗೆ ಹೆಚ್ಚಿನ ಮಹತ್ವ ನೀಡಿದ್ದರು. ೬ ನೇ ವಿಕ್ರಮಾದಿತ್ಯನ ಕಾಲದಲ್ಲಿ ಗೋರಟಾದಲ್ಲಿ ಸಂಗೀತ ವಿಶ್ವವಿದ್ಯಾಲಯ ಇತ್ತೆಂಬುದರ ಬಗ್ಗೆ ದಾಖಲೆಗಳು ದೊರೆತಿವೆ. ಇದಲ್ಲದೆ ೧೨ ನೇ ಶತಮಾನದಲ್ಲಿ ಬಸವಾದಿ ಶರಣರು ರಚಿಸಿದ ವಚನಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಅದಾದಮೇಲೆ ಇಲ್ಲಿ ಎಲ್ಲದಕ್ಕೂ ಬರ ಕಂಡು ಬಂತು. ಈಗಲೂ ಈ ಎರಡೂ ಕ್ಷೇತ್ರದ ಬೆಳವಣಿಗೆ ಅಷ್ಟಕ್ಕಷ್ಟೇ ಆಗಿದ್ದು, ಈ ಕಲೆಗಳಮಟ್ಟಿಗೆ ಬರಡು ನೆಲವೆಂದೇ ಬೀದರ್ ಜಿಲ್ಲೆಯನ್ನು ಗುರುತಿಸಲಾಗುತ್ತದೆ.

ಇಂಥದರಲ್ಲಿ ಹಿಂದೂಸ್ತಾನಿ ಸಂಗೀತದಲ್ಲಿ ವಿಶಿಷ್ಟ ಸಾಧನೆಗೈದು ರಾಜ್ಯ ಸರ್ಕಾರದ ಪ್ರತಿಷ್ಠಿತ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪಡೆದುಕೊಂಡವರು ಹಿರಿಯರಾದ ಪಂ.ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿಯವರು. ಅವರ ಜೀವನ ಸಾಧನೆಯ ಬಗ್ಗೆ ಪುಸ್ತಕ ರಚಿಸುವುದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಿಂದ ಅವಕಾಶ ನೀಡಿರುವುದು ನನ್ನ ಭಾಗ್ಯವೇ ಸರಿ. ಬೀದರ್ ನಲ್ಲಿ ಜರುಗಿರುವ ಜಿಲ್ಲಾ ಮಟ್ಟದ ೧೬ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪುಸ್ತಕವನ್ನು ಬಿಡುಗಡೆಗೊಳಿಸುತ್ತಿರುವುದಕ್ಕೆ ಸಂತಸ ಆಗುತ್ತಿದೆ.

ಅದಕ್ಕಾಗಿ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಸುರೇಶ ಚನ್ನಶೆಟ್ಟಿ, ಗೌರವ ಕಾರ್ಯದರ್ಶಿಗಳಾದ ಹಾಗೂ ಸಾಹಿತಿಗಳಾದ ಡಾ.ಬಸವರಾಜ

ಬಲ್ಲೂರ ಮತ್ತು ಪರಿಷತ್ತಿನ ಜಿಲ್ಲಾ ಘಟಕದ ಪದಾಧಿಕಾರಿಗಳಿಗೆ ಹಾಗೂ ಬಸವಕಲ್ಯಾಣ ತಾಲ್ಲೂಕು ಘಟಕದ ಅಧ್ಯಕ್ಷ ಡಾ.ರುದ್ರಮಣಿ ಮಠಪತಿ ಮತ್ತು ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದಲ್ಲದೆ ಸಮ್ಮೇಳನದ ಸರ್ವಾಧ್ಯಕ್ಷರಾದ ಅಕ್ಕ ಅನ್ನಪೂರ್ಣ ಹಾಗೂ ಈ ಕಾರ್ಯದಲ್ಲಿ ಸಹಕರಿಸಿದ ಹಿತೈಷಿಗಳಿಗೆ, ಮುನ್ನುಡಿ ಬರೆದಿರುವ ಸಾಹಿತಿಗಳಾದ ಡಾ.ಶಿವಾಜಿ ಮೇತ್ರೆ ಹಾಗೂ ಲೇಖಕರ ಪರಿಚಯ ನೀಡಿರುವ ಪರಿಷತ್ತಿನ ತಾಲ್ಲೂಕು ಗಡಿನಾಡು ಪ್ರತಿನಿಧಿ ಬಸವಣ್ಣಪ್ಪ ನೆಲ್ಲಗಿ ಹಾಗೂ ಮುದ್ರಕರಿಗೆ ವಂದನೆಗಳು.

೦೫-೦೨-೨೦೧೯ ಮಾಣಿಕ ಆರ್.ಭುರೆ

ಬೀದರ್

ಕಲಾಶ್ರೀ ವಿರೂಪಾಕ್ಷಯ್ಯ ಗೋರಟಾ

'ನೀ ಹುಟ್ಟಿಸಿದಲ್ಲಿ ಹುಟ್ಟಿದೆ ದೇವ..' ಎಂಬ ವಚನವನ್ನು ಹಿರಿಯ ಸಂಗೀತಗಾರ ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಅವರು ಭಾವುಕರಾಗಿ ಹಾಡುತ್ತಿದ್ದರೆ ಕೇಳುಗರ ಕಣ್ಣುಗಳು ಆರ್ದ್ರಗೊಳ್ಳುತ್ತವೆ. ಹಾಡುವಾಗ ಅವರ ಗಂಟಲು ಹಿಡಿದಂತಾಗಿ ರಾಗ ತಪ್ಪಿದಂತೆ ಭಾಸವಾಗುತ್ತದಾದರೂ ಆ ಧ್ವನಿ ಇನ್ನೂ ಕೇಳುತ್ತಲೇ ಇರಬೇಕು ಎನಿಸುತ್ತದೆ. ೯೩ ರ ವಯಸ್ಸಿನಲ್ಲಿಯೂ ಅವರ ಮಧುರ ಧ್ವನಿ, ಸಂಗೀತದಲ್ಲಿನ ಪ್ರಯೋಗಶೀಲತೆ, ತನ್ಮಯತೆ, ಏಕಾಗ್ರತೆಯನ್ನು ಕಂಡು ಎಂಥವರೂ ಬೆರಗಾಗುತ್ತಾರೆ.

ಇವರು ಸಂಗೀತಗಾರ ಆಗಿದ್ದರೂ, ಹೆಚ್ಚಾಗಿ ಸಂಗೀತ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಪುರಾಣ, ಪ್ರವಚನ ಹೇಳಿದ್ದಾರೆ. ತಾವೇ ಪಾತ್ರಧಾರಿಯಾಗಿ ನಾಟಕದ ರಂಗು ಹೆಚ್ಚಿಸಿದ್ದಾರೆ. ಈ ಕಾರಣ ಅವರು ಹಾಡುವಾಗ ನಾಟಕದಲ್ಲಿನ ಪಾತ್ರವೇ ಜೀವ ತಳೆದಿದೆಯೇನೋ ಅನಿಸುತ್ತದೆ. ಈ ಮೂಲಕ ಪಾತ್ರಕ್ಕೆ ಜೀವ ಕೊಡುವ ಅವರಲ್ಲಿನ ಕಳಕಳಿ, ನಟನಾ ಸಾಮರ್ಥ್ಯದ ಪರಿಚಯ ಆಗುತ್ತದೆ.

ಶತಾಯುಷಿ ಆಗಲು ಇನ್ನು ಕೆಲವೇ ವರ್ಷಗಳು ಬಾಕಿ ಇದ್ದರೂ ಯುವಕರಂತೆ ಉತ್ಸಾಹ, ಹುಮ್ಮಸ್ಸಿನಿಂದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ಯಾವುದೇ ಆಡಂಬರವಿಲ್ಲದ ಸಾದಾ, ಸರಳ ಜಿವನ ಸಾಗಿಸುವುದರೊಂದಿಗೆ ಸಾತ್ವಿಕ ಆಹಾರ ಸೇವಿಸುತ್ತಾರೆ. ಯಾವಾಗಲೂ ಒಂದೇ ತೆರನಾದ ಬಟ್ಟೆ ಧರಿಸುತ್ತಾರೆ. ತಲೆಮೇಲೆ ಹಳದಿ ರುಮಾಲು, ಬಿಳಿ ಅಂಗಿ, ಕೊರಳಿಗೆ ಸುತ್ತಿರುವ ಕೆಂಪು ಟವೆಲು. ಇವಿಷ್ಟನ್ನು ನೋಡಿದ ಯಾರಾದರೂ ಇವರು ವಿರೂಪಾಕ್ಷಯ್ಯನವರು ಎಂದು ದೂರದಿಂದಲೇ ಗುರುತು ಹಿಡಿಯುತ್ತಾರೆ. ಇವರು ಸಂಗೀತ ವಿದ್ವಾಂಸ ಆಗಿರುವ ಜತೆಗೆ ಅನುಭಾವಿ ಕವಿಗಳು ಕೂಡ ಹೌದು. ಇವರು ಸದುವಿನಯಿಗಳು, ಆತ್ಮೀಯ ಸ್ವಭಾವದವರು. ಸದಾಚಾರ ಸಂಪನ್ನರು, ಅನುಭಾವಿ, ಪ್ರಪಂಚದೊಳಿದ್ದು ಪಾರಮಾರ್ಥದ ಸಾಧಕರು.

ಬಸವಕಲ್ಯಾಣ ತಾಲ್ಲೂಕಿನ ಗೋರಟಾ(ಬಿ) ಇವರ ಊರು. ಶಿವಲಿಂಗಯ್ಯ ಹಾಗೂ ಸಂಗಮ್ಮ ದಂಪತಿಗಳ ಮಗನಾಗಿ ೧೯೨೬ ರಲ್ಲಿ ಜನಿಸಿದರು. ಈ ಸ್ಥಳ ಐತಿಹಾಸಿಕವಾಗಿ ಮಹತ್ವ ಪಡೆದಿದೆ. ಇಲ್ಲಿ ಚಾಲುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಸಂಗೀತ ವಿಶ್ವವಿದ್ಯಾಲಯ ಇತ್ತೆಂಬ ದಾಖಲೆ ದೊರೆತಿದೆ. ಇಲ್ಲಿನ ರುದ್ರೇಶ್ವರ ಹಾಗೂ ಇತರೆ ದೇವರಿಗೆ ನಿತ್ಯವೂ ಸಂಗೀತ ರುದ್ರಪೂಜೆ ನಡೆಯುತ್ತಿತ್ತು ಎಂಬ ಪ್ರತೀತಿ ಇದೆ. ಹಿಂದಿನ ಕಾಲದ ಕೆಲ ಕುರುಹುಗಳು ಗ್ರಾಮದಲ್ಲಿ ಇವೆ.

ವಿರೂಪಾಕ್ಷಯ್ಯನವರು ನಿತ್ಯವೂ ಸಂಗೀತ ರುದ್ರಪೂಜೆ ಕೈಗೊಂಡು ತಮ್ಮೂರಿನ ಇತಿಹಾಸ ಕಣ್ಣೆದುರಿಗೆ ಬರುವಂತೆ ಮಾಡುತ್ತಾರೆ. ಈ ಮೂಲಕ ಗ್ರಾಮದ ಗತವೈಭವಕ್ಕೆ ಜೀವ ಕೊಡುತ್ತಾರೆ ಎಂದರೆ ತಪ್ಪಾಗಲಾರದು. ಸಂಗೀತ ರುದ್ರ ಸಂಘ ಸ್ಥಾಪಿಸಿ ನೂರಾರು ಮನೆ, ಮಠಗಳಲ್ಲಿ ರುದ್ರಪೂಜೆ ಹಮ್ಮಿಕೊಂಡಿದ್ದರು. ಇವರ ತಂದೆ ಶಿವಲಿಂಗಯ್ಯ ಕೂಡ ನಾಟಕ ರಚಿಸಿದ್ದರು. ಜಾನಪದ ಹಾಡುಗಾರ ಆಗಿದ್ದರು. ಸಣ್ಣಾಟ, ಡಪ್ಪಿನಾಟ ಆಡಿಸುತ್ತಿದ್ದರು. ಆ ಕಲೆ ಮಗನಿಗೂ ಸಿದ್ಧಿಸಿದೆ. ವಿರೂಪಾಕ್ಷಯ್ಯನವರು ಬರೀ ಸಂಗೀತಗಾರ ಅಷ್ಟೇ ಅಲ್ಲ; ಸಾಹಿತಿಯೂ ಆಗಿದ್ದಾರೆ. ಬಹುಮುಖ ಪ್ರತಿಭೆಯ ಖಣಿ ಎಂದರೆ ತಪ್ಪಾಗಲಾರದು.

ಸಂಗೀತ ರುದ್ರಮಂತ್ರ ಹಾಡುವುದರಿಂದ ಸಂಗೀತ ಕ್ಷೇತ್ರದಲ್ಲಿ ಹೇಗೆ ಪ್ರಸಿದ್ಧರಾಗಿದ್ದಾರೋ, ರಜಾಕಾರರ ಹಾವಳಿಯ ಸವಿಸ್ತಾರ ಮಾಹಿತಿಯುಳ್ಳ ಭುಲಾಯಿ ಪದ ಬರೆದು ಹಾಗೂ ಗೋರಟಾ(ಬಿ) ಗ್ರಾಮದಲ್ಲಿನ ಹತ್ಯಾಕಾಂಡದ ಕುರಿತಾದ ಪುಸ್ತಕ ರಚಿಸಿ ಸಾಹಿತ್ಯರಂಗದಲ್ಲಿ ಮಿಂಚಿದ್ದಾರೆ. 'ಭಕ್ತಿ ಕುಸುಮಾಂಜಲಿ' 'ಭುಲಾಯಿಪದ' 'ಗುರುಗಾನಸ್ತುತಿ' 'ಗುರುಗಾನ ಪ್ರಭೆ' 'ರಾಚೋಟಿ ಶಿವಾಚಾರ್ಯರ ಮಹಾಸ್ವಾಮಿಗಳ ಪುರಾಣ' 'ಹೈದರಾಬಾದ್ ಕರ್ನಾಟಕ ಜಲಿಯನವಾಲಾ ಬಾಗ್ ಗೋರಟಾ' 'ಹಾರಕೂಡ ಚನ್ನಬಸವ ಶಿವಯೋಗಿಗಳ ಲೀಲಾಮೃತ' 'ರಾಚೋಟಿ ಶಿವಾಚಾರ್ಯರ ನಾಟಕ' 'ಶಿವಲಿಂಗಯ್ಯ ಮಠಪತಿಯವರ ಜೀವನ ಚರಿತ್ರೆ' 'ರೇಣುಕ ವಿಜಯ' ನಾಟಕ, 'ಕೋಲಾಟದ ಪದಗಳು' ಎಂಬಿತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಗೋರಟಾ(ಬಿ)ಗೆ ಸಮೀಪದಲ್ಲಿರುವ ಗಡಿಗೌಡಗಾಂವದ ನೂರಂದಯ್ಯ ಗವಾಯಿಗಳಿಂದ ಹಾಗೂ ನಂತರದಲ್ಲಿ ಹೈದರಾಬಾದ್ ನ ಪಂಡಿತ್ ನಾಗೇಶ ದಿವಾಣಜಿ ಹತ್ತಿರ ಸಂಗೀತ ಕಲಿತಿದ್ದಾರೆ. ಸರ್ಕಾರಿ ಸಂಗೀತ ಮತ್ತು ನೃತ್ಯ ಪಾಠಶಾಲೆ ಹೈದರಾಬಾದ್ ನಲ್ಲಿ ಶಿಕ್ಷಣ ಪಡೆದು ಸಂಗೀತ ಭೂಷಣ ಪದವಿ ಪಡೆದಿದ್ದಾರೆ. ಅಖಿಲ ಭಾರತ ಗಂಧರ್ವ ಮಹಾಮಂಡಳ ಮುಂಬೈನಿಂದ ಸಂಗೀತ ವಿಶಾರದ ಪದವಿ ಪಡೆದರು. ೧೯೫೭ ರಲ್ಲಿ ಗ್ರಾಮದಲ್ಲಿ 'ಶಾರದಾ ಸಂಗೀತ ವಿದ್ಯಾಲಯ' ಸ್ಥಾಪಿಸಿದರು. ಮರುವರ್ಷ ಹೈದರಾಬಾದ್ ಕರ್ನಾಟಕ ಪ್ರಾಂತೀಯ ಸಂಗೀತ ಸಮ್ಮೇಳನ ನಡೆಸಿದ್ದಾರೆ. ನೂರಾರು ಆಸಕ್ತರಿಗೆ ಸಂಗೀತದ ವಿದ್ಯೆ ನೀಡಿದ್ದಾರೆ. ಇವರ ಸಂಗೀತ ಗರಡಿಯಲ್ಲಿ ಬೆಳೆದ ಅನೇಕ ಶಿಷ್ಯರು ನಾಡಿನ ತುಂಬೆಲ್ಲ ಸಂಗೀತ, ನೃತ್ಯ, ರುದ್ರಪೂಜೆಯಲ್ಲಿ ನಿರತರಾಗಿ ಕೀರ್ತಿ ಪತಾಕೆ ಎತ್ತರಕ್ಕೊಯ್ದಿದ್ದಾರೆ.

ಇವರು ಪ್ರಸಿದ್ಧ ಪುರಾಣಿಕರು ಕೂಡ ಆಗಿದ್ದಾರೆ. ರೇಣುಕ ವಿಜಯ, ಶಿವಪುರಾಣ, ಶಿವಗೀತೆ, ಅಕ್ಕಮಹಾದೇವಿ ಪುರಾಣ, ಬಸವೇಶ್ವರ ಪುರಾಣ, ನವನಾಥ ಪುರಾಣ, ಎಡೆಯೂರು ಸಿದ್ಧಲಿಂಗೇಶ್ವರ ಪುರಾಣ, ಕಲಬುರ್ಗಿ ಶರಣಬಸವೇಶ್ವರ ಪುರಾಣ ಹೀಗೆ ಮೂವತ್ತಕ್ಕೂ ಹೆಚ್ಚು ಪುರಾಣ, ಪ್ರವಚನಗಳನ್ನು ಹೇಳಿದ್ದಾರೆ. ಮೇಹಕರ, ಡೋಣಗಾಪುರ ಕಟ್ಟಿಮನಿ ಹಿರೇಮಠ ಸಂಸ್ಥಾನದ ಅಧಿಪತಿಗಳಾಗಿ ಅಪಾರ ಭಕ್ತರನ್ನು ಸಂಪಾದಿಸಿದ್ದ ಷ.ಬ್ರ.ಲಿಂ.ರಾಚೋಟಿ ಶಿವಾಚಾರ್ಯ ಮಹಾಸ್ವಾಮೀಜಿ ಅವರ ಬಗ್ಗೆ ಇವರು ರಚಿಸಿದ ಪುರಾಣ ಬಹುಪ್ರಸಿದ್ಧವಾಗಿದೆ.

ಬಸವಣ್ಣನವರ ಸಮಾಜೋಧಾರ್ಮಿಕ ಕಾರ್ಯ

ವಿರೂಪಾಕ್ಷಯ್ಯನವರು ಜನ್ಮಪಡೆದಿರುವ ಗೋರಟಾ (ಬಿ) ಗ್ರಾಮಕ್ಕೆ ತನ್ನದೇಯಾದ ಐತಿಹಾಸಿಕ ಮಹತ್ವ ಇರುವಂತೆ ಈಗ ತಾಲ್ಲೂಕು ಸ್ಥಳವಾದ ಬಸವಕಲ್ಯಾಣವೂ ಅಂದು ವಿವಿಧ ರಾಜರುಗಳ ರಾಜಧಾನಿಯಾಗಿ ಮೆರೆದಿತ್ತು. ೧೨ ನೇ ಶತಮಾನದಲ್ಲಿ ಇಲ್ಲಿ ಆಳ್ವಿಕೆ ನಡೆಸಿದ್ದ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಿಯಾಗಿದ್ದ ಬಸವಣ್ಣನವರ ಸಮಾಜೋಧಾರ್ಮಿಕ ಕಾರ್ಯದಿಂದ ಇಲ್ಲಿನ ಕೀರ್ತಿ ದಶದಿಕ್ಕುಗಳಲ್ಲಿ ಹರಡಿತ್ತು.

ಹಾಗೆ ನೋಡಿದರೆ, ಸಾಮ್ರಾಟ ಅಶೋಕನು ಈ ಭಾಗ ಒಳಗೊಂಡು ರಾಜ್ಯದ ಚಿತ್ರದುರ್ಗದವರೆಗೆ ತನ್ನ ಸಾಮ್ರಾಜ್ಯ ವಿಸ್ತರಿಸಿದ್ದನು. ಇದಲ್ಲದೆ, ಈ ಪ್ರದೇಶದಲ್ಲಿ ನಂದವಂಶ, ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಕಳಚೂರಿ, ದೇವಗಿರಿಯ ಯಾದವ, ತುಘಲಕ್, ಬಹಮನಿ, ಮೊಘಲ್, ಬರೀದ್ ಶಾಹಿ, ಮರಾಠಾ, ಆದಿಲ್ ಶಾಹಿ, ಪೇಶ್ವೆ, ಹೈದರಾಬಾದ್ ನಿಜಾಮ್ ರಾಜಮನೆತನದವರು ಆಳ್ವಿಕೆ ನಡೆಸಿದ್ದಾರೆ.

ಕಲ್ಯಾಣ ಹಾಗೂ ಕಲಬುರ್ಗಿ ವಿಭಾಗದ ಈ ಪ್ರದೇಶ ೧೭ ನೇ ಶತಮಾನದಿಂದೀಚೆಗೆ ನಿಜಾಮ್ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ನಂತರದಲ್ಲಿ ಹೈದರಾಬಾದ್ ರಾಜ್ಯದ ಭಾಗವಾಯಿತು. ಅದಾದಮೇಲೆ ಏಕೀಕರಣಗೊಂಡ ಕರ್ನಾಟಕಕ್ಕೆ ಸೇರ್ಪಡೆ ಆಗಿದ್ದರಿಂದ ಇದನ್ನು ಹೈದರಾಬಾದ್ ಕರ್ನಾಟಕ ಭಾಗ ಎಂದು ಕರೆಯುವುದು ರೂಢಿಯಾಗಿದೆ.

ಮುಖ್ಯವೆಂದರೆ, ಈಗ ಇದು ಹಿಂದುಳಿದ ಪ್ರವದೇಶವೆಂದು ಪರಿಗಣಿಸಲ್ಪಡುತ್ತಿದ್ದರೂ ಇಲ್ಲಿ ಆಳ್ವಿಕೆ ನಡೆಸಿದ್ದ ವಿವಿಧ ರಾಜರುಗಳು ಇದನ್ನು ಸಂಪದ್ಭರಿತ ರಾಜ್ಯವನ್ನಾಗಿ, ಸಾಹಿತ್ಯ, ಕಲೆ, ಸಂಸ್ಕೃತಿಯ ಬೀಡನ್ನಾಗಿ ಪರಿವರ್ತಿಸಿದ್ದರು. ಹೀಗಾಗಿ ಇದು ಸುಖಿ ರಾಜ್ಯವೆನಿಸಿತ್ತು.

ಬಸವಣ್ಣನವರ ನೇತೃತ್ವದಲ್ಲಿ ನಡೆದ ಕಾರ್ಯವಂತೂ ಅಮೋಘವಾದುದಾಗಿತ್ತು. ಅವರು ಪ್ರಧಾನಿ ಪಟ್ಟದಲ್ಲಿದ್ದರೂ ರಾಜವೈಭವಕ್ಕೆ ಮರುಳಾಗಲಿಲ್ಲ. ತನ್ನ ಸ್ಥಾನದ ದರ್ಪ, ದೌರ್ಜನ್ಯ ತೋರಲಿಲ್ಲ. ಜನಸಾಮಾನ್ಯರ ಕಷ್ಟಸುಖಗಳಲ್ಲಿ ಭಾಗಿಯಾದರು. ಸಮಾಜದಲ್ಲಿ ಬಲವಾಗಿ ಬೇರೂರಿದ್ದ ಜಾತಿ, ಲಿಂಗ ಆಧಾರದಲ್ಲಿನ ತಾರತಮ್ಯ ತೊಡೆದು ಹಾಕಲು ಪ್ರಯತ್ನಿಸಿದರು. ಮೇಲು, ಕೀಳು, ಬಡವ, ಬಲ್ಲಿದ ಎನ್ನದೆ ಎಲ್ಲರೊಡಗೂಡಿ, ಸರ್ವರದು ಸಮಬಾಳು, ಸರ್ವರಿಗೂ ಸಮಪಾಲು ಎಂದು ಸಾರಿ ಸಾಮಾಜಿಕ ನ್ಯಾಯ ಪ್ರತಿಪಾದಿಸಿದರು.

ಜಗತ್ತಿನ ಮೊದಲ ಸಂಸತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾದ ಅನುಭವ ಮಂಟಪ ಕಟ್ಟಿದರು. ಕಾಯಕ, ದಾಸೋಹ ತತ್ವ ಸಾರಿದರು. ಮೂಢನಂಬಿಕೆ, ಕಂದಾಚಾರವನ್ನು ವಿರೋಧಿಸಿ ಅರಿವಿನ ಮಾರ್ಗ ತೋರಿದರು.

ಪ್ರತಿಯೊಬ್ಬರು ವೈಚಾರಿಕ, ವೈಜ್ಞಾನಿಕ ನೆಲೆಯಲ್ಲಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತಾಗಲು ವಚನಗಳನ್ನು ರಚಿಸಿ ಜನಜಾಗೃತಿ ಕೈಗೊಂಡರು.

ಅವರ ಈ ಮಹೋನ್ನತ ಕಾರ್ಯದಲ್ಲಿ ನೂರಾರು ಶರಣರು ಕೈಜೋಡಿಸಿದರು. ಹೆಗಲಿಗೆಹೆಗಲು ಕೊಟ್ಟು ಶ್ರಮಿಸಿದರು. ಅಲ್ಲಮಪ್ರಭುದೇವರು, ಚನ್ನಬಸವಣ್ಣ, ಸಿದ್ಧರಾಮೇಶ್ವರ, ಅಕ್ಕ ನಾಗಮ್ಮ, ಅಂಬಿಗರ ಚೌಡಯ್ಯ, ಸಮಗಾರ ಹರಳಯ್ಯ, ನುಲಿಯ ಚಂದಯ್ಯ, ಮಾದಾರ ಚೆನ್ನಯ್ಯ, ಧೂಳಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವರು, ಡೋಹರ ಕಕ್ಕಯ್ಯ, ಕಂಬಳಿ ನಾಗಿದೇವ, ಗೊಲ್ಲಾಳೇಶ್ವರ, ಉರಿಲಿಂಗಪೆದ್ದಿ, ಮೋಳಿಗೆಯ ಮಾರಯ್ಯ, ಹೂಗಾರ ಮಾದಯ್ಯ, ಘಟ್ಟಿವಾಳಯ್ಯ, ಅಕ್ಕಮಹಾದೇವಿ ಮುಂತಾದವರು ಅನುಭವ ಮಂಟಪದ ಸದಸ್ಯರಾಗಿ ಸಮಾಜದ ಆಗುಹೋಗುಗಳ ಬಗ್ಗೆ ಚಿಂತನ, ಮಂಥನಗೈಯುತ್ತಾರೆ. ಲಿಂಗಾಯತ ಧರ್ಮಸೂತ್ರವನ್ನು ಚಾಚೂತಪ್ಪದೇ ಪಾಲಿಸುತ್ತಾರೆ. ಸಮಾನತೆಯ ತಳಹದಿಯ ಸಮಾಜ ಕಟ್ಟಲು ಕಂಕಣಬದ್ಧರಾಗುತ್ತಾರೆ.

ಬಸವಣ್ಣನವರ ಸಾನಿಧ್ಯದಲ್ಲಿ ಸಮಗಾರ ಹರಳಯ್ಯ ಮತ್ತು ಬ್ರಾಹ್ಮಣ ಮಧುವಯ್ಯನ ಮಕ್ಕಳ ಅಂತರ್ಜಾತಿಯ ಮದುವೆ ಏರ್ಪಡುತ್ತದೆ. ಆಗ ಶರಣರು ಆಳರಸರ ಕೆಂಗಣ್ಣಿಗೆ ಗುರಿ ಆಗುತ್ತಾರೆ. ಹರಳಯ್ಯ ಮುಂತಾದವರಿಗೆ ಆನೆ ಕಾಲಿಗೆ ಕಟ್ಟಿ ಎಳೆಯುವ ಎಳೆಹೂಟೆ ಶಿಕ್ಷೆ ವಿಧಿಸಲಾಗುತ್ತದೆ. ಇದರಿಂದ ಕಲ್ಯಾಣದಲ್ಲಿ ಅಲ್ಲೋಲಕಲ್ಲೋಲವಾಗಿ 'ಕಲ್ಯಾಣಕ್ರಾಂತಿ' ಘಟಿಸುತ್ತದೆ. ಬಸವಣ್ಣನವರು ಒಳಗೊಂಡು ಇತರೆ ಶರಣಗಣದವರು ಕಲ್ಯಾಣವನ್ನು ತೊರೆಯುವಂಥ ಪರಿಸ್ಥಿತಿ ಬಂದೊದಗುತ್ತದೆ. ಇದು ಇತಿಹಾಸದ ಪುಟಗಳಲ್ಲಿನ ಮರೆಯದಂಥ ಘಟನೆಯಾಗಿದೆ. ಅಂದು ಕೈಗೊಂಡ ಸಮಾಜ ಸುಧಾರಣೆಯ ಕಾರ್ಯ ಹಾಗೂ ನಡೆಸಿದ ಕ್ರಾಂತಿಯಿಂದಾಗಿ ಬಸವಾದಿ ಶರಣರು ಇಂದಿಗೂ ಜನಮಾನಸದಲ್ಲಿ ಅಜರಾಮರ ಆಗಿದ್ದಾರೆ. ಅವರು ಬರೆದ ಸಾವಿರಾರು ವಚನಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು ಲೋಕಜಾಗೃತಿಯ ಕಾರ್ಯಗೈಯುತ್ತಿವೆ.

ಗೋರಂಟಿ ಆಗಿದ್ದ ಗೋರಟಾ (ಬಿ) ಗ್ರಾಮ

ಗೋರಟಾ (ಬಿ) ಗ್ರಾಮದ ಪ್ರದೇಶ ಬಸವಣ್ಣನವರ ಕಲ್ಯಾಣಕ್ರಾಂತಿಗೂ ಮೊದಲೇ ಪ್ರಸಿದ್ಧಿಗೆ ಬಂದಿತ್ತು ಎಂಬುದರ ಬಗ್ಗೆ ವಿವಿಧೆಡೆ ದಾಖಲೆಗಳು ದೊರೆತಿವೆ. ಕಲ್ಯಾಣಿ ಚಾಲುಕ್ಯರ ೬ ನೇ ವಿಕ್ರಮಾದಿತ್ಯನ (೧೦೭೭ ರಿಂದ ೧೧೨೭) ಕಾಲದಲ್ಲಿ ಇದು 'ಗೋರಂಟಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಇಲ್ಲಿ ರುದ್ರೇಶ್ವರ, ಕುಂಭೇಶ್ವರ, ಮಲ್ಲೇಶ್ವರ, ಸಂಕೇಶ್ವರ ಹಾಗೂ ನಗರೇಶ್ವರ ಎಂಬ ಹೆಸರಿನ ಪ್ರಮುಖ ದೇವಾಲಯಗಳಿದ್ದವು. ರುದ್ರೇಶ್ವರ ದೇವರಿಗೆ ವಿಕ್ರಮಾದಿತ್ಯನ ಗುರು ರುದ್ರಮಿಶ್ರನ ನೇತೃತ್ವದಲ್ಲಿ ನಿತ್ಯವೂ ಸಂಗೀತದೊಂದಿಗೆ ರುದ್ರಾಭಿಷೇಕ ಪೂಜೆ ನಡೆಯುತ್ತಿತ್ತು ಎಂಬುದರ ದಾಖಲೆಗಳು ಸಿಕ್ಕಿವೆ.

ಇಲ್ಲಿ ದೊರೆತ ಏಳು ಶಿಲಾ ಶಾಸನಗಳಲ್ಲಿ ಈ ಗ್ರಾಮದ ಭವ್ಯ ಸಾಂಸ್ಕೃತಿಕ ಪರಂಪರೆಯ ಉಲ್ಲೇಖವಿದೆ. ಅಂದು ಇಲ್ಲಿ ಸಂಗೀತ ವಿಶ್ವವಿದ್ಯಾಲಯ ಇತ್ತು. ಶಿಲಾ ಶಾಸನಗಳನ್ನು ಬರೆಯಿಸುವ ಕೇಂದ್ರವೂ ಆಗಿತ್ತು. ಗ್ರಾಮದ ಸಮೀಪದಲ್ಲಿ ಶಾಸನಪಟ್ಟಿ ಎಂಬ ಸ್ಥಳವಿದ್ದು ಅಲ್ಲಿ ಶಾಸನಗಳನ್ನು ಬರೆಸಲಾಗುತ್ತಿತ್ತು.

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾದ ಬೀದರ್ ಜಿಲ್ಲೆಯ ಶಾಸನಗಳು ಸಂಪುಟ ೮ ರಲ್ಲಿ (ಪುಟ-೬೪) ಉಲ್ಲೇಖವಿರುವಂತೆ ಗ್ರಾಮದ ಹನುಮಂತನ ಗುಡಿಯ ಮುಂಭಾಗದಲ್ಲಿನ ಕಲ್ಲಿನ ಮೇಲೆ ಕ್ರಿ.ಶ. ೧೦೮೨ ರಂದು ಬರೆಯಲಾದ ಒಕ್ಕಣೆಯಲ್ಲಿ ತ್ರಿಭುವನಮಲ್ಲನು ರಾಜಧಾನಿ ಕಲ್ಯಾಣಪುರದಿಂದ ಆಳುತ್ತಿದ್ದಾಗ ಇವನ ಸದ್ಗುರುವಾಗಿ ರುದ್ರಮಿಶ್ರನಿದ್ದನು. ಇವನು ವಶಿಷ್ಠ ವಂಶದವನಿದ್ದನು.

ಅಟ್ಟಳೆಯ ಕಂಪನಂ ಭಲ್ಲುಂಕೆ ೮೪ ರ ಬಳಿಯ ಹುಲಿಚೆರು ಗ್ರಾಮದ ಅಗ್ರಹಾರ ಗೋರಂಟಿಯಲ್ಲಿ ಮಾಡಿಸಿದ್ದ ರುದ್ರೇಶ್ವರ ದೇವರ ಅಂಗಭೋಗ, ರಂಗಭೋಗ, ಗೀತ, ವಾದ್ಯ, ನೃತ್ಯ, ಪಾದಮೂಲ ಪರಿಹಾರ, ತಪೋಧನ, ಉಪಾಧ್ಯಾಯ, ವಿದ್ಯಾರ್ಥಿಗಳ ಊಟ-ಬಟ್ಟೆಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಸತ್ರಕ್ಕೆ, ಫಳಿಗೆಗೆ ಅಗ್ಗಟ್ಟಿಕೆಗೆಂದು ತ್ರಿಭೋಗಾಭ್ಯಂತರವಾಗಿ

ನೀಡುತ್ತಾನೆ ಎಂಬ ಉಲ್ಲೇಖವಿದೆ. ಹೀಗಾಗಿ ಇಲ್ಲಿ ಸಂಗೀತ ವಿಶ್ವವಿದ್ಯಾಲಯ ಇತ್ತೆಂಬುದನ್ನು ಊಹಿಸಬಹುದಾಗಿದೆ. ಇದಲ್ಲದೆ ಇನ್ನೊಂದು ಶಾಸನದಲ್ಲಿ ಈ ವಿಶ್ವವಿದ್ಯಾಲಯದಲ್ಲಿ ಏಳುನೂರು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಎಪ್ಪತ್ತು ವಿದ್ವಾಂಸರು ಉಪನ್ಯಾಸಕರಾಗಿ ಕಾರ್ಯಗೈಯುತ್ತಿದ್ದರು ಎಂಬುದು ಹಾಗೂ ಇಲ್ಲಿ ವಿವಿಧ ದೇವಸ್ಥಾನಗಳು ಇದ್ದವು ಎಂಬ ಉಲ್ಲೇಖವೂ ಇದೆ.

ಗ್ರಾಮದಲ್ಲಿ ನಾಥಪಂಥದ ಅಗ್ರಗಣ್ಯ ಗುರುವಾದ ಗೋರಕ್ಷನಾಥನ (ಗೋರಖನಾಥ) ಗುಡಿಯಿದೆ. ಅವರು ಇಲ್ಲಿ ಕೆಲಕಾಲ ವಾಸಿಸಿದ್ದರು ಎನ್ನಲಾಗುತ್ತದೆ. ಅವರು ನೆಲೆಸಿದ ಹಾಗೂ ಧ್ಯಾನಗೈದ ಸ್ಥಳದಲ್ಲಿ ಮಂದಿರವಿದೆ. ಈ ಸ್ಥಳ ಅನೇಕರ ಶ್ರದ್ಧಾಕೇಂದ್ರವಾಗಿದೆ. ಗ್ರಾಮದಲ್ಲಿ ಹಿರೇಮಠ, ಝುಂಗೀನಮಠ, ಸಿದ್ದಯ್ಯನವರ ಮಠಗಳಿವೆ. ಹಳೆಯದಾಗಿರುವ ಶಿಲ್ಪಕಲಾಕೃತಿಗಳಿಂದ ನಿರ್ಮಿಸಿದ ಮಹಾದೇವ ದೇವಸ್ಥಾನ, ಲಕ್ಷ್ಮಿ ದೇವಸ್ಥಾನ, ನಗರೇಶ್ವರ ಗುಡಿ, ಭವಾನಿ ದೇವಸ್ಥಾನ, ಹನುಮಾನ, ಸಂಗಮೇಶ್ವರ ದೇವಸ್ಥಾನಗಳು ಗ್ರಾಮದಲ್ಲಿವೆ.

ಡಾ.ರಾಜಶೇಖರಸ್ವಾಮಿ ಗೋರಟಾ ಅವರ ನೇತೃತ್ವದಲ್ಲಿ ಗ್ರಾಮದ ಹೊರಭಾಗದಲ್ಲಿನ ಹೊನ್ನಳ್ಳಿ ರಸ್ತೆಯಲ್ಲಿ ನೂತನವಾಗಿ ಸಂಗೀತ ರುದ್ರೇಶ್ವರರ ಭವ್ಯ ದೇವಸ್ಥಾನ ನಿರ್ಮಿಸಿ ಗ್ರಾಮಕ್ಕೆ ಗತವೈಭವ ಪ್ರಾಪ್ತವಾಗುವಂತೆ ಪ್ರಯತ್ನಿಸಲಾಗುತ್ತಿದೆ. ಗ್ರಾಮದ ಪಶ್ಚಿಮಭಾಗದಲ್ಲಿರುವ ಬಸವ ಮಂಟಪವನ್ನು ಬೀದರ್ ಬಸವ ಸೇವಾ ಪ್ರತಿಷ್ಠಾನದ ಅಕ್ಕ ಅನ್ನಪೂರ್ಣನವರು ಸುಪರ್ದಿಗೆ ತೆಗೆದುಕೊಂಡು ಲಿಂಗಾಯತ ಮಹಾಮಠವನ್ನಾಗಿ ಪರಿವರ್ತಿಸಿದ್ದಾರೆ. ರಜಾಕಾರರ ಹಾವಳಿಯಲ್ಲಿ ಹುತಾತ್ಮರಾದವರ ಸ್ಮರಣೆಗಾಗಿ ಭಾಲ್ಕಿ-ಬಸವಕಲ್ಯಾಣ ರಸ್ತೆ ಪಕ್ಕದಲ್ಲಿ ಹುತಾತ್ಮ ಸ್ಮಾರಕ ಕಟ್ಟಲಾಗಿದೆ. ಊರಿನ ಪಶ್ಚಿಮಕ್ಕೆ ಹಳ್ಳವಿದೆ. ಇದರ ಸಮೀಪದ ಗಣಪನ ಮೂರ್ತಿ ಇರುವುದರಿಂದ ಇದನ್ನು ಬೆನಕನ ಹಳ್ಳ ಎಂದು ಕರೆಯಲಾಗುತ್ತದೆ. ಮುಚಳಂಬ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಕೇಶಿಕೆರೆಯೂ ಇದೆ. ಗ್ರಾಮದ ಸುತ್ತಲಿನಲ್ಲಿ ಮುಚಳಂಬ, ಘಾಟಬೋರೋಳ, ಘೋಡವಾಡಿ, ಹೊನ್ನಳ್ಳಿ, ತೊಗಲೂರ ಗ್ರಾಮಗಳಿವೆ.

ಗ್ರಾಮವು ಐತಿಹಾಸಿಕವಾಗಿ ಮಹತ್ವ ಪಡೆದಿರುವಂತೆಯೇ ಇದು ಅನೇಕ ಪುಣ್ಯ ಪುರುಷರಿಗೆ ಹಾಗೂ ದೊಡ್ಡ ಕಲಾವಿದರಿಗೆ ಜನ್ಮ ನೀಡಿದ ತಾಣವೂ ಆಗಿದೆ. ಇಲ್ಲಿನ ವಿರೂಪಾಕ್ಷಯ್ಯ ಶಿವಲಿಂಗಯ್ಯ ಅವರು ಕರ್ನಾಟಕ ಸಂಗೀತ ಅಕಾಡೆಮಿಯ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗೆ ಭಾಜನರಾದರೆ ಇದೇ ಗ್ರಾಮದವರಾದ ವಿರೂಪಾಕ್ಷಯ್ಯ ಸಿದ್ರಾಮಯ್ಯ ಮಠಪತಿ ಕೆಳಗಲ್ಲಿ ರಾಜ್ಯ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿಯಾದ 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿ ಪಡೆದಿದ್ದಾರೆ.

ಮಹಾಮಹಿಮ ನಾವದಗಿಯ ರೇವಪ್ಪಯ್ಯ ಅವರಿಗೆ ಲಿಂಗದೀಕ್ಷೆ ನೀಡಿದ ಗುರುಗಳಾದ ಏಕಲಿಂಗ ಮನೆತನದ ಶ್ರೀ ಸಿದ್ದಲಿಂಗಪ್ಪ ಮುತ್ಯಾ, ಪ್ರಭುದೇವರು, ರಾಚೋಟಿ ಶಿವಾಚಾರ್ಯರು, ಬೆಮಳಖೇಡ ಕಾಶಿನಾಥಸ್ವಾಮಿ, ಅಡವಿರಯ್ಯ ಸ್ವಾಮೀಜಿ, ಮೆಹಕರ್- ಡೋಣಗಾಪುರ ಕಟ್ಟಿಮನಿ ಸಂಸ್ಥಾನ ಹಿರೇಮಠ ಹಾಗೂ ತಡೋಳಾ ಆಶ್ರಮದ ಪೂಜ್ಯ ಶ್ರೀ ಷ.ಬ್ರ.ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಗೋರಟಾ ಹಿರೇಮಠದ ಸುರೇಶ ಸ್ವಾಮಿ ಮುಂತಾದವರು ಇಲ್ಲಿನವರೇ ಆಗಿದ್ದಾರೆ. ಎಲ್ಲರೂ ವೀರಮಾಹೇಶ್ವರ ಜಂಗಮ ಕುಟುಂಬದವರು.

ಮೇಲಗಲ್ಲಿ ವಿರೂಪಾಕ್ಷಯ್ಯ ಹಾಗೂ ಕೆಳಗಲ್ಲಿ ವಿರೂಪಾಕ್ಷಯ್ಯನವರು

ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಮೇಲಗಲ್ಲಿ ಅವರಂತೆಯೇ ಇವರ ಸಮವಯಸ್ಕರಾಗಿದ್ದ ಕೆಳಗಲ್ಲಿಯ ಲಿಂ.ವಿರೂಪಾಕ್ಷಯ್ಯ ಸಿದ್ರಾಮಯ್ಯ ಮಠಪತಿಯವರು ಕೂಡ ಸಂಗೀತ ಕ್ಷೇತ್ರದಲ್ಲಿ ಸಾಧನೆಗೈದು ಗ್ರಾಮದ ಕೀರ್ತಿ ಬೆಳಗಿಸಿದ್ದಾರೆ. ಮುಖ್ಯವೆಂದರೆ, ಇಬ್ಬರೂ ಸಂಗೀತ ರುದ್ರಸಂಘ ಸ್ಥಾಪಿಸಿ ಜತೆಯಾಗಿಯೇ ನಾಡಿನ ವಿವಿಧೆಡೆ ರುದ್ರಪೂಜೆಗೈದಿದ್ದಾರೆ. ಒಬ್ಬರು ಕರ್ನಾಟಕ ಸರ್ಕಾರದ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗೆ ಭಾಜನರಾದರೆ ಇನ್ನೊಬ್ಬರು 'ರಾಜ್ಯೋತ್ಸವ ಪ್ರಶಸ್ತಿ' ಪಡೆದಿದ್ದಾರೆ. ಕೆಳಗಲ್ಲಿಯ ವಿರೂಪಾಕ್ಷಯ್ಯ ಸಿದ್ರಾಮಯ್ಯನವರ ಉಡುಗೆ ತೊಡುಗೆಯೂ ಮೇಲಗಲ್ಲಿ ವಿರೂಪಾಕ್ಷಯ್ಯನವರಂತೆಯೇ ಇತ್ತು. ಇಬ್ಬರೂ ಕೂಡಿಕೊಂಡು ಪ್ರಥಮವಾಗಿ

ಗೋರಟಾ ಹತ್ಯಾಕಾಂಡದ ಕುರಿತಾದ 'ಭುಲಾಯಿ ಪದ' ಪುಸ್ತಕ ರಚಿಸಿದ್ದಾರೆ. ಇಬ್ಬರ ಮಕ್ಕಳು ಕೂಡ ಸಂಗೀತ ಹಾಗೂ ಸಾಹಿತ್ಯದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ.

ವಿರೂಪಾಕ್ಷಯ್ಯ ಶಿವಲಿಂಗಯ್ಯನವರ ಹಿರಿಯ ಮಗ ವಿಶ್ವನಾಥಯ್ಯ ಶಿವಶರಣರ ವಚನಗಳ ತಾಡೋಲೆಗಳನ್ನು ಸಂಗ್ರಹಿಸಿದ್ದಾರೆ. ಇದಲ್ಲದೆ ವಿಶ್ವನಾಥಯ್ಯ ಹಾಗೂ ಅವರ ಮಗನಾದ ಕನ್ನಡ ಸಾಹಿತ್ಯ ಪರಿಷತ್ತಿನ ಬಸವಕಲ್ಯಾಣ ತಾಲ್ಲೂಕು ಘಟಕದ ಅಧ್ಯಕ್ಷ ಆಗಿರುವ ಡಾ.ರುದ್ರಮಣಿ ಮಠಪತಿ ಕೂಡಿಕೊಂಡು ಹರಿಹರ ರಗಳೆ ಮಹತ್ವ ಸಂಪಾದಿಸಿ ಪ್ರಕಟಿಸಿದ್ದಾರೆ. ಡಾ.ರುದ್ರಮಣಿಯವರು ಬಸವಕಲ್ಯಾಣದ ಬಸವೇಶ್ವರ ವಿದ್ಯಾಸಂಸ್ಥೆಯಲ್ಲಿ ಪ್ರಾಚಾರ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. 'ನಾಥಪಂಥ ಒಂದು ಅಧ್ಯಯನ' ಕುರಿತಾಗಿ ಪ್ರಬಂಧ ರಚಿಸಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯೂ ಪಡೆದಿದ್ದಾರೆ.

ಕೆಳಗಲ್ಲಿ ವಿರೂಪಾಕ್ಷಯ್ಯನವರ ಹಿರಿಯ ಮಗ ಡಾ.ಸಿದ್ರಾಮಯ್ಯಸ್ವಾಮಿ ಬಾಗಲಕೋಟೆಯ ಬಸವೇಶ್ವರ ಸಂಗೀತ ಕಾಲೇಜಿನಲ್ಲಿ ಪ್ರಾಧ್ಯಾಪಕ ಆಗಿದ್ದರು. 'ಹಿಂದೂಸ್ತಾನಿ ಸಂಗೀತಗಾರರು' ಕೃತಿ ಒಳಗೊಂಡು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಎರಡನೇ ಮಗ ಡಾ.ರಾಜಶೇಖರಸ್ವಾಮಿ ಕೂಡ ಸಾಹಿತಿ ಆಗಿದ್ದಾರೆ. ಗ್ರಾಮದ ಸಂಗೀತ ರುದ್ರೇಶ್ವರ ದೇವಸ್ಥಾನದ ಅಧಿಪತಿಯೂ ಆಗಿದ್ದಾರೆ. ಕಿರಿಯುಮಗ ರುದ್ರೇಶ್ವರ ಗೋರಟಾ ಬಸವಕಲ್ಯಾಣದ ರಾಜೀವಗಾಂಧಿ ಪದವಿ ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿಯಲ್ಲಿದ್ದಾರೆ.

ವಿರೂಪಾಕ್ಷಯ್ಯ ಶಿವಲಿಂಗಯ್ಯನವರ ಕುಟುಂಬ

ಗೋರಟಾ(ಬಿ) ದಲ್ಲಿ ಕಳೆದ ೧೦೦ ವರ್ಷಗಳಲ್ಲಿ ಮಠಪತಿ, ಹಿರೇಮಠ, ಪಟವಾದಿ, ಏಕಲಿಂಗೆ ಎಂಬ ವೀರ ಮಾಹೇಶ್ವರ ಜಂಗಮರ ೨೦ ಕುಟುಂಬಗಳು ಬೆಳೆದಿವೆ. ಶತಮಾನಕ್ಕೂ ಮೊದಲು ಈ ಊರಲ್ಲಿ ಜಂಗಮರು ಇರಲಿಲ್ಲ ಎನ್ನಲಾಗುತ್ತದೆ. ಗ್ರಾಮದಲ್ಲಿನ ಅರ್ಧ ಭಾಗಕ್ಕೆ ಮೇಲಗಲ್ಲಿ ಮತ್ತು ಇನ್ನರ್ಧ ಭಾಗಕ್ಕೆ ಕೆಳಗಲ್ಲಿ ಎಂದು ಮೊದಲಿನಿಂದಲೂ ಕರೆಯುವ ರೂಢಿಯಿದೆ.

ಮೇಲಗಲ್ಲಿಯಲ್ಲಿನ ವಿರೂಪಾಕ್ಷಯ್ಯ ಶಿವಲಿಂಗಯ್ಯ ಅವರ ಕುಟುಂಬ ಪ್ರಥಮವಾಗಿ ಈ ಗ್ರಾಮಕ್ಕೆ ಬಂದು ನೆಲೆಸಿದೆ. ಇವರ ತಾತ, ಮುತ್ತಾತನ ಕಾಲದಲ್ಲಿ ಇಲ್ಲಿಗೆ ಬಂದಿರಬಹುದು. ಗೋರಟಾ (ಬಿ) ದಿಂದ ೮೦ ಕಿ.ಮೀ ಅಂತರದಲ್ಲಿನ ಮಹಾರಾಷ್ಟ್ರದ ಜಿಲ್ಲಾ ಕೇಂದ್ರ ಲಾತೂರಕ್ಕೆ ಸಮೀಪವಿರುವ ಬಾಭೂಳಗಾಂವ ಪಕ್ಕದ 'ಮಾಟಿಗಡಿ' ಎಂಬುದು ಇವರ ಪೂರ್ವಜರ ಊರು. ಆ ಊರಿನೊಂದಿಗೆ ಇಂದಿಗೂ ಸಂಬಂಧವಿದೆ ಎಂದು ವಿರೂಪಾಕ್ಷಯ್ಯನವರ ಮೊಮ್ಮಗ ಡಾ.ರುದ್ರಮಣಿ ಹೇಳುತ್ತಾರೆ.

ಗ್ರಾಮದಲ್ಲಿನ ಧಾರ್ಮಿಕ ಕಾರ್ಯಗಳು, ಮದುವೆ, ಮುಂಜಿ ಹಾಗೂ ಇತರೆ ಶುಭ ಕಾರ್ಯ ಮಾಡುವುದಕ್ಕಾಗಿ ಜಂಗಮರ ಅವಶ್ಯಕತೆ ಆಗಿದ್ದರಿಂದ ಮೇಲಗಲ್ಲಿಯವರು ಸಭೆ ನಡೆಸಿ ವಿರೂಪಾಕ್ಷಯ್ಯ ಶಿವಲಿಂಗಯ್ಯನವರ ಕುಟುಂಬದವರನ್ನು ಇಲ್ಲಿಗೆ ಆಹ್ವಾನಿಸುತ್ತಾರೆ. ನಂತರದಲ್ಲಿ ಕೆಳಗಲ್ಲಿಯವರು ಕೂಡ ಪರ ಊರಿನ ಜಂಗಮ ಕುಟುಂಬದವರನ್ನು ಆಹ್ವಾನಿಸುತ್ತಾರೆ. ಹೀಗೆ ಒಂದೊಂದು ಕುಟುಂಬದವರು ಬಂದಿದ್ದರಿಂದ ಜಂಗಮರ ಐದಾರು ಕುಟುಂಬದವರು ಇಲ್ಲಿ ನೆಲೆನಿಂತಿದ್ದಾರೆ.

ವಿರೂಪಾಕ್ಷಯ್ಯ ಶಿವಲಿಂಗಯ್ಯನವರ ಪತ್ನಿ ನೀಲಮ್ಮ ಲಿಂಗೈಕ್ಯರಾಗಿದ್ದಾರೆ. ಇಬ್ಬರು ಪುತ್ರರು, ಮೂವರು ಪುತ್ರಿಯರಿದ್ದಾರೆ. ವಿಶ್ವನಾಥಯ್ಯ ಹಾಗೂ ರಾಜಶೇಖರ ಇವರ ಪುತ್ರರು. ರಾಜಶೇಖರ ಅಕಾಲಿಕವಾಗಿ ಮರಣಹೊಂದಿದರು. ಶಕುಂತಲಾ, ಶ್ರೀದೇವಿ, ಮಹಾನಂದಾ ಪುತ್ರಿಯರು.

ವಿಶ್ವನಾಥಯ್ಯ ಇವರಿಗೆ ಭಾಲ್ಕಿ ತಾಲ್ಲೂಕಿನ ಕಾಸಾರ ತೂಗಾಂವ ವಾಡಿಯ ವಿಮಲಾಬಾಯಿ ಅವರೊಂದಿಗೆ ಮದುವೆಯಾಗಿದ್ದು ಡಾ.ರುದ್ರಮಣಿ ಮಠಪತಿ ಇವರ ಏಕೈಕ ಪುತ್ರ. ಮಾಯಾದೇವಿ, ಗುರುದೇವಿ, ಪಾರ್ವತಿ, ಅನ್ನಪೂರ್ಣ, ಗೌರಮ್ಮ ಪುತ್ರಿಯರಿದ್ದಾರೆ. ಮಾಯಾದೇವಿಗೆ ಡೊಂಗರಗಾಂವದ ಬಸವರಾಜ ಹಿರೇಮಠ ಅವರೊಂದಿಗೆ ಮದುವೆಯಾಗಿದೆ. ಗುರುದೇವಿ ಅವರನ್ನು ಕಲಬುರ್ಗಿಯ ಮಹಾಂತೇಶ ಅವರೊಂದಿಗೆ ಮದುವೆ ಮಾಡಿಕೊಡಲಾಗಿದೆ.

ಡಾ.ರುದ್ರಮಣಿ ಎಂ.ಎ.ಬಿ.ಇಡಿ ಹಾಗೂ ಪಿಎಚ್.ಡಿ ಪದವಿ ಪಡೆದಿದ್ದಾರೆ. ಗುರುದೇವಿ ಬಿ.ಎ, ಬಿ.ಇಡಿ ಶಿಕ್ಷಣ ಪಡೆದಿದ್ದಾರೆ. ಪಾರ್ವತಿ ಎಂ.ಎ.(ಇಂಗ್ಲಿಷ್) ಬಿ.ಇಡಿ ಪದವಿ ಪಡೆದಿದ್ದಾರೆ. ಅನ್ನಪೂರ್ಣ ಬಿ.ಎ.ಬಿ.ಇಡಿ ಹಾಗೂ ಗೌರಮ್ಮ ಎಂ.ಎ.(ಕನ್ನಡ) ಬಿ.ಇಡಿ ಪದವಿ ಪಡೆದಿದ್ದಾರೆ.

ವಿರೂಪಾಕ್ಷಯ್ಯನವರ ಹಿರಿಯ ಪುತ್ರಿ ಶಕುಂತಲಾ ಅವರನ್ನು ಖಟಕಚಿಂಚೋಳಿಯ ಷಣ್ಮುಖಯ್ಯ ದಿಂಡೆ ಅವರೊಂದಿಗೆ ವಿವಾಹ ಮಾಡಿಕೊಡಲಾಗಿದ್ದು ಈ ದಂಪತಿಗಳಿಗೆ ಬಸವರಾಜ ದಿಂಡೆ, ಶಿವರಾಜ ದಿಂಡೆ, ಮಹಾದೇವಿ, ಪಾರ್ವತಿ ಈ ನಾಲ್ವರು ಮಕ್ಕಳಿದ್ದಾರೆ. ಇನ್ನೊಬ್ಬ ಪುತ್ರಿ ಶ್ರೀದೇವಿ ಅವರಿಗೆ ತೊಗಲೂರರ ಮಲ್ಲಯ್ಯ ಮಠ ಅವರೊಂದಿಗೆ ಮದುವೆ ಮಾಡಲಾಗಿದ್ದು ಪ್ರತಿಭಾ (ಎಂ.ಎಸ್ಸಿ) ಹಾಗೂ ಪ್ರಮೋದ (ಎಂ.ಎ.ಎಲ್.ಎಲ್.ಬಿ) ಈ ಇಬ್ಬರು ಮಕ್ಕಳಿದ್ದಾರೆ.

ಕಿರಿಯ ಮಗಳು ಮಹಾನಂದಾ ಅವರಿಗೆ ಗಡಿರಾಯಪಳ್ಳಿಯ ಸಂಬಯ್ಯ ಮಠ ಹಾಗೂ ಶರಣಮ್ಮ ದಂಪತಿಗಳ ಪುತ್ರ ಶಿವಕುಮಾರ ಮಠ ಅವರೊಂದಿಗೆ ಮದುವೆ ಮಾಡಿಕೊಡಲಾಗಿದ್ದು ಈ ದಂಪತಿಗಳಿಗೆ ರೇಣುಕಪ್ರಸಾದ ಮಠ (ಬಿ.ಇ, ಎಂ.ಟೆಕ್) ಭಾರತಿ (ಎಂ.ಎ, ಬಿ.ಇಡಿ) ಈ ಇಬ್ಬರು ಮಕ್ಕಳಿದ್ದಾರೆ. ಶಿವಕುಮಾರ ಮಠ ಅವರು ನಿವೃತ್ತ ಸೈನಿಕರಾಗಿದ್ದಾರೆ. ಬಸವಕಲ್ಯಾಣದ ಗಂಗಾ ಕಾಲೋನಿಯಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ.

ವಿರೂಪಾಕ್ಷಯ್ಯನವರಿಗೆ ಸಂಗೀತದ ಒಲವು

ವಿರೂಪಾಕ್ಷಯ್ಯನವರ ತಂದೆ ಶಿವಲಿಂಗಯ್ಯ ಹೈದರಾಬಾದ್ ಕರ್ನಾಟಕ ಭಾಗದಲ್ಲಿನ ದೊಡ್ಡಾಟದ ಪ್ರಥಮ ಗ್ರಂಥ ರಚನಾಕಾರರು ಎಂದು ಹೇಳಲಾಗುತ್ತದೆ. ಅವರು ದೊಡ್ಡಾಟದ ಕಲಾವಿದ ಆಗಿರುವ ಜತೆಗೆ ಬರಹಗಾರರು ಕೂಡ ಆಗಿದ್ದರು. ಆದರೂ, ಅವರ ಗ್ರಂಥ ಉಪಲಬ್ಧವಿಲ್ಲ. ತಾಯಿ ಸಂಗಮ್ಮ ಧರ್ಮಪರಾಯಣೆ ಆಗಿದ್ದಳು. ಜಾನಪದ ಗೀತೆಗಳನ್ನು ಹಾಡುತ್ತಿದ್ದಳು. ಹೀಗೆ ಮನೆಯಲ್ಲಿ ಸಂಗೀತ, ನಾಟಕದ ವಾತಾವರಣ ಇರುವುದರಿಂದ ವಿರೂಪಾಕ್ಷಯ್ಯನವರಿಗೆ ಸಂಗೀತದ ಬಗ್ಗೆ ಒಲವು ಮೂಡಲು ಕಾರಣವಾಯಿತು.

ತಂದೆ ಶಿವಲಿಂಗಯ್ಯನವರೇ ಇವರಿಗೆ ಕೆಲ ದಿನ ಸಂಗೀತ ಕಲಿಸಿದರು. ಇವರಲ್ಲಿನ ಆಸಕ್ತಿ ಗುರುತಿಸಿ ಗ್ರಾಮಕ್ಕೆ ಸಮೀಪವಿರುವ ಗಡಿಗೌಡಗಾಂವದ ನೂರಂದಯ್ಯ ಗವಾಯಿಗಳನ್ನು ಗ್ರಾಮಕ್ಕೆ ಆಹ್ವಾನಿಸಿ ಅವರಿಂದ ಸಂಗೀತದ ಪಾಠ ಹೇಳಿಕೊಡುವ ವ್ಯವಸ್ಥೆ ಕಲ್ಪಿಸಿದರು. ನೂರಂದಯ್ಯ ಅವರು ಸಾಮಾನ್ಯರೇನೂ ಆಗಿರಲಿಲ್ಲ. ಗ್ವಾಲಿಯರ ಘರಾಣೆಯ ಅದ್ವಿತೀಯ ಗಾಯಕ ಪಂ.ರಾಮಕೃಷ್ಣಬುವಾ ವಝೆ ಅವರ ಶಿಷ್ಯರಾಗಿದ್ದರು. ಇವರು ಗೈರುಹಾಜರಾದ ದಿನ ವಿರೂಪಾಕ್ಷಯ್ಯ ಅವರಿಗೆ ಅಣ್ಣನವರಾಗಿದ್ದ ರೇವಣಯ್ಯನವರು ಸಂಗೀತ ಕಲಿಸುತ್ತಿದ್ದರು.

ಹೀಗೆ ಕಲಿಕೆ ಮುಂದುವರೆಯಿತು. ಅದರೊಂದಿಗೆ ಸಂಗೀತದಲ್ಲಿ ಮಗ ಉನ್ನತ ಶಿಕ್ಷಣ ಪಡೆಯಲಿ, ದೊಡ್ಡ ಸಂಗೀತಗಾರನಾಗಿ ಪ್ರಸಿದ್ಧಿ ಪಡೆಯಲಿ ಎಂಬ ಬಯಕೆ ತಂದೆಯವರ ಮನದಲ್ಲಿ ಚಿಗುರೊಡೆಯಿತು. ಆದರೆ, ಸಂಗೀತದ ಉನ್ನತ ಶಿಕ್ಷಣ ನೀಡುವ ವಿದ್ಯಾಕೇಂದ್ರಗಳು ಈ ಭಾಗದಲ್ಲಿ ಇದ್ದಿರಲಿಲ್ಲ. ಆದ್ದರಿಂದ ಇವರನ್ನು ಹಾಗೂ ಕೆಳಗಲ್ಲಿಯ ವಿರೂಪಾಕ್ಷಯ್ಯನವರನ್ನು ಜೊತೆಯಾಗಿಸಿ ಶಿಕ್ಷಣಕ್ಕಾಗಿ ಹೈದರಾಬಾದ್ ಗೆ ಕಳುಹಿಸಲಾಗುತ್ತದೆ.

ಮೇಹಕರ- ಡೋಣಗಾಪುರ ಕಟ್ಟಿಮನಿ ಸಂಸ್ಥಾನ ಹಿರೇಮಠದ ಪೂಜ್ಯ ಷ.ಬ್ರ.ರಾಚೋಟಿ ಶಿವಾಚಾರ್ಯ ಸ್ವಾಮೀಜಿಯವರು ಇವರನ್ನು ಹೈದರಾಬಾದ್ ಗೆ ಕಳುಹಿಸಿ ಕೊಡುವಲ್ಲಿ ಎಲ್ಲ ರೀತಿಯ ನೆರವು ನೀಡುತ್ತಾರೆ. ಈ ಇಬ್ಬರೂ ಸಂಗೀತದಲ್ಲಿ ಉನ್ನತ ಶಿಕ್ಷಣ ಪಡೆಯಲಿ ಹಾಗೂ ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲಿ ಎಂಬ ಸದುದ್ದೇಶ ಅವರದ್ದಾಗಿರುತ್ತದೆ.

ಹೈದರಾಬಾದ್ ನ ವಿವೇಕ ವರ್ಧಿನಿ ಸಂಗೀತ ಮಹಾವಿದ್ಯಾಲಯದಲ್ಲಿ ಹೆಸರಾಂತ ಸಿತಾರವಾದಕರಾದ ಪಂ.ನಾಗೇಶ ಗಣೇಶ ದಿವಾಣಜಿ ಅವರಿಂದ ವಿರೂಪಾಕ್ಷಯ್ಯ ಶಿವಲಿಂಗಯ್ಯ ನವರು ಪಿಟೀಲು ವಾದನ ಹಾಗೂ ವಿರೂಪಾಕ್ಷಯ್ಯ ಸಿದ್ರಾಮಯ್ಯನವರು ಸಿತಾರವಾದನವನ್ನು ಕಲಿತು ಆರು ವರ್ಷಗಳವರೆಗೆ ಸತತ ಅಧ್ಯಯನ ನಡೆಸಿ ಸಂಗೀತಭೂಷಣ ಪದವಿ ಪಡೆದು ಊರಿಗೆ ಹಿಂದಿರುಗುತ್ತಾರೆ. ಅಖಿಲ ಭಾರತ ಗಂಧರ್ವ ಮಹಾಮಂಡಳಿ ಮುಂಬೈಯಿಂದಲೂ ಸಂಗೀತ ವಿಶಾರದ ಪದವಿ ಪಡೆದರು.

ನಂತರದಲ್ಲಿ 'ಶ್ರೀ ಸಂಗೀತ ರುದ್ರಸಂಘ' ಎಂಬ ವೇದಗಾಯನ ಸಂಘ ಸ್ಥಾಪಿಸಿ ೨೦ ವರ್ಷಗಳಿಂದ ಸಂಗೀತ ಸೇವಾ ಕೈಂಕರ್ಯವನ್ನು ಇವರು ಕೈಗೊಂಡಿದ್ದಾರೆ.

ಇವರ ರುದ್ರಸಂಘವು ನಾಡಿನಾದ್ಯಂತ ಪ್ರಸಿದ್ಧವಾಗಿದೆ. ಇವರು ಸ್ವರ ಸಂಯೋಜಿಸಿದ ನೂರಾರು ಬಂದೀಶಗಳು ಉತ್ತರ ಪ್ರದೇಶದ ಹಾಥರಸನ ಸಂಗೀತ ಕಾರ್ಯಾಲಯದ 'ಸಂಗೀತ' ಹೆಸರಿನ ಹಿಂದಿ ಮಾಸ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ.

ವಿರೂಪಾಕ್ಷಯ್ಯ ಶಿವಲಿಂಗಯ್ಯನವರು ಪುರಾಣ ಹೇಳುತ್ತಾರೆ. ಸಂಗೀತ ರುದ್ರಪೂಜೆಗೈಯುತ್ತಾರೆ. ಸಂಗೀತದ ಪಾಠ ಹಾಗೂ ರುದ್ರಪಾಠ ಹೇಳಿಕೊಡುತ್ತಾರೆ. ಇದು ಇವರ ಹವ್ಯಾಸ ಹಾಗೂ ವೃತ್ತಿ ಎರಡೂ ಆಗಿವೆ. ಇದರಿಂದಲೇ ಬದುಕು ಕೂಡ ಕಟ್ಟಿಕೊಂಡಿದ್ದಾರೆ. ಯಾವುದೇ ಫಲಾಪೇಕ್ಷೆ ಇಲ್ಲದೆ ತಮ್ಮ ಸಂಗೀತ ಸೇವಾ ಕೈಕರ್ಯವನ್ನು ಕೈಗೊಂಡ ಇವರು ಅನೇಕ ಶಿಷ್ಯರನ್ನು ಸಂಪಾದಿಸಿದ್ದಾರೆ. ಇವರ ನಾಟಕಪ್ರೀತಿ ದೊಡ್ಡದು. ನಾಟಕದಲ್ಲಿ ಯಾವ ಪಾತ್ರ ನೀಡಿದರೂ ಸೈ ಎಂದು ಅದನ್ನುನಿಭಾಯಿಸಿದ್ದಾರೆ. ತಮ್ಮ ಅಭಿನಯದಿಂದ ಎಂಥವರನ್ನೂ ಮಂತ್ರಮುಗ್ಧರನ್ನಾಗಿಸುವ ಕಲೆ ಇವರಿಗೆ ಕರಗತವಾಗಿದೆ. ಹೇಮರೆಡ್ಡಿ ಮಲ್ಲಮ್ಮನ ನಾಟಕದಲ್ಲಿ ಸ್ತ್ರೀ ಪಾತ್ರ, ಪಾರ್ವತಿ ಸತ್ವ ಪರೀಕ್ಷೆಯಲ್ಲಿ ನಾರದನ ಪಾತ್ರ ಸಮರ್ಥವಾಗಿ ನಿರ್ವಹಿಸಿದ್ದಾರೆ.

ದೈವಚಿತ್ರ, ಅತ್ತಿ ಅಳಿಯ, ಬಾಲಚಂದ್ರ, ಹೊಸ ಸಂಸಾರ, ಭಕ್ತ ಮಾರ್ಕಂಡೇಯ, ಮಂಗಳಗೌರಿ, ದಾರಿದೀಪ, ಸ್ತ್ರೀರತ್ನ, ದೇವರಿಗೆ ನೆನಪಿಲ್ಲ, ಅತ್ತೆಸೊಸೆ ಮುಂತಾದ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಬಹುತೇಕ ನಾಟಕಗಳನ್ನು ಇವರೇ ರಚಿಸಿದ್ದು ಕೂಡ ಉಂಟು. ನಾಡಿನಾದ್ಯಂತ ರೇಣುಕ ವಿಜಯ, ಶಿವಪುರಾಣ, ಶಿವಗೀತೆ, ಅಕ್ಕಮಹಾದೇವಿ ಪುರಾಣ, ಬಸವೇಶ್ವರ ಪುರಾಣ, ನವನಾಥ ಪುರಾಣ, ಎಡೆಯೂರು ಸಿದ್ಧಲಿಂಗೇಶ್ವರ ಪುರಾಣ, ಕಲಬುರ್ಗಿ ಶರಣಬಸವೇಶ್ವರ ಪುರಾಣ ಮುಂತಾದ ಪುರಾಣಗಳನ್ನು ವಾಚಿಸಿದ್ದಾರೆ. 'ಶ್ರೀ ಷ.ಬ್ರ.ರಾಚೋಟಿ ಶಿವಾಚಾರ್ಯ ಮಹಾಸ್ವಾಮಿಗಳ ಪುರಾಣ' ಸ್ವತಃ ರಚಿಸಿ ವಾಚಿಸಿದ್ದಾರೆ. ಪ್ರವಚನ ಹೇಳಿದ್ದಾರೆ.

ಊರಲ್ಲಿ ನಾಟಕ ದೊಡ್ಡಿಯ ನಿರ್ಮಾಣ

ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಮೇಲಗಲ್ಲಿ ಹಾಗೂ ವಿರೂಪಾಕ್ಷಯ್ಯ ಸಿದ್ರಾಮಯ್ಯ ಮಠಪತಿ ಕೆಳಗಲ್ಲಿ ಇವರ ಆಸಕ್ತಿಯಿಂದಾಗಿ ಗೋರಟಾ(ಬಿ) ನಾಟಕದ ಊರಾಗಿ ಪರಿವರ್ತಿತವಾಗಿತ್ತು. ಕೆಳಗಲ್ಲಿಯ ಕೆಲವರು ಸಭೆ ನಡೆಸಿ ನಾಟಕದ ದೊಡ್ಡಿಯನ್ನೇ ನಿರ್ಮಾಣ ಮಾಡಿದ್ದರು. ಮುಖ್ಯವೆಂದರೆ, ಮೊದಲು ಕೂಡ ಇಲ್ಲಿಯ ಜನರಲ್ಲಿ ನಾಟಕದ ರುಚಿ ಇತ್ತು. ಆದರೂ ನಂತರದಲ್ಲಿ ವಿರೂಪಾಕ್ಷಯ್ಯ ಅವರಂಥ ಯುವಕರ ಉತ್ಸಾಹ ಇಮ್ಮಡಿಗೊಂಡು ಹೆಚ್ಚಿನ ಚಟುವಟಿಕೆಗಳು ನಡೆದವು.

ನಾಟಕವಾಡಲು ಬೇಕಾಗುವ ಪರದೆ, ಉಡುಗೆ ತೊಡಿಗೆ, ತಬಲಾ, ಹಾರ್ಮೋನಿಯಂ, ಬೆಳಕಿನ ವ್ಯವಸ್ಥೆಗಾಗಿ ಎಣ್ಣೆಯಿಂದ ಉರಿಸುವ ಗೋಲಾ ಹಾಗೂ ಇದೆಲ್ಲವನ್ನು ಸಂಗ್ರಹಿಸಿ ಇಡುವುದಕ್ಕಾಗಿ ಜಾಗ ಖರೀದಿಸಿ ಕಟ್ಟಡ ಕಟ್ಟಲಾಯಿತು. ಅದಕ್ಕೆ 'ನಾಟಕ ಕಂಪೆನಿ ಕೆಳಗಲ್ಲಿ' ಎಂದು ಹೆಸರಿಡಲಾಯಿತು. ಇದರ ಯಜಮಾನರಾಗಿ ಚನ್ನಬಸಪ್ಪ ಧೂಳಪ್ಪ ಬಿರಾದಾರ ನೇಮಕಗೊಂಡು ಸಾಮಾನುಗಳನ್ನು ಕೊಡು ಕೊಳ್ಳುವುದನ್ನು ಮಾಡುತ್ತಿದ್ದರು. ಆಗ ರಜಾಕಾರರ ಉಪಟಳ ಇದ್ದುದರಿಂದ ನಡು ಊರಲ್ಲಿ ನಾಟಕ ದೊಡ್ಡಿಯ ನಿರ್ಮಾಣಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಆದರೂ, ಊರಿನ ಜನರೆಲ್ಲ ಕೂಡಿಕೊಂಡು ರಾತ್ರೋರಾತ್ರಿ ನಾಟಕ ದೊಡ್ಡಿಯನ್ನು ಕಟ್ಟಿದ್ದರು.

ಹೀಗೆ ಗ್ರಾಮವು ನಿರಂತರ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಯಿತು. ಕೆಳಗಲ್ಲಿಯಲ್ಲಿ ಒಮ್ಮೆ, ಮೇಲಗಲ್ಲಿಯಲ್ಲಿ ಒಮ್ಮೆ ಸ್ಪರ್ಧೆ ಏರ್ಪಟ್ಟಂತೆ ನಾಟಕಗಳನ್ನು ಆಡಿಸಲಾಗುತ್ತಿತ್ತು. ದಿನ ಬೆಳಗಾದರೆ ಗ್ರಾಮಸ್ಥರು ಕಟ್ಟೆಯ ಮೇಲೆ ಕುಳಿತು, ಯಾರು ಎಷ್ಟು ಚೆಂದ ನಾಟಕವಾಡಿದರು. ಆ ಗಲ್ಲಿಯವರಕ್ಕಿಂತ ಈ ಗಲ್ಲಿಯಲ್ಲಿವರು ನಾಟಕವಾಡಲು ಹಣೆಯುವುದಿಲ್ಲ ಎಂಬಿತ್ಯಾದಿ ಮಾತುಗಳನ್ನಾಡುವುದು, ಇದರ ಬಗ್ಗೆಯೇ ಹರಟೆ ಹೊಡೆಯುವುದು ನಡೆಯುತ್ತಿತ್ತು. ಮೇಲಗಲ್ಲಿಯಲ್ಲಿನ ಚಟುವಟಿಕೆಗಳಿಗೆ ಮೊದಲ ಸಂಗೀತಗಾರನಾಗಿ ಸಿಂಪಿಗೇರ ಮುತ್ಯಾ ಸಹಕರಿಸಿದ ಬಗ್ಗೆ ಗ್ರಾಮಸ್ಥರು ಈಗಲೂ ನೆನಪಿಸಿಕೊಳ್ಳುತ್ತಾರೆ.

ಮುತ್ಯಾನವರು ನಾಟಕ ಕಲಿಸುವ ವೇಳೆ ಊರಲ್ಲಿ ಹಾರ್ಮೋನಿಯಂ, ತಬಲಾ ಯಾವವೂ ಲಭ್ಯ ಇರಲಿಲ್ಲ. ಕುಂಬಳಕಾಯಿಯ ಮುಖಕ್ಕೆ ಅರಳಿ ಎಲೆ ಸುತ್ತಿ ಊದುವುದು ಹಾಗೂ ಮೃದಂಗ ಬಾರಿಸುವುದು, ತಾಳ ಹಾಕುತ್ತ ದೊಡ್ಡಾಟ ಆಡಿಸಲಾಗುತ್ತಿತ್ತಂತೆ. ನಂತರ ಇಲ್ಲಿನ ಕಲ್ಲಯ್ಯ, ಮಹಾಲಿಂಗಯ್ಯ ಮಠಪತಿಯವರು ತಂಬೂರಿ ಹಿಡಿದು ಚಟುವಟಿಕೆಗಳನ್ನು ಆರಂಭಿಸಿದರು. ಅಲ್ಲದೆ ಆಗ ಬೆಳಕಿಗಾಗಿ ಗೋಲಾ, ಕಂದೀಲು ಕೂಡ ಇದ್ದಿರಲಿಲ್ಲ. ಮಣ್ಣಿನ ಮುಚ್ಚಳದಲ್ಲಿ ಹತ್ತಿ ಎಣ್ಣೆ ಹಾಕಿ ದೀಪ ಉರಿಸಲಾಗುತ್ತಿತ್ತು. ಶಿವರಾಯ ಗೋರುಪಾಟೀಲ ಅವರು ಮಧುರ ಕಂಠದ ಹಾಡುಗಾರ ಆಗಿದ್ದರು. ಅವರಿಂದ ಇಡೀ ನಾಟಕಕ್ಕೆ ಹೊಸ ರಂಗು ಬರುತ್ತಿತ್ತು ಎಂದು ಹಿರಿಯರು ಹೇಳುತ್ತಿದ್ದರು ಎಂಬುದರ ಬಗ್ಗೆ ಈಗಲೂ ಚರ್ಚಿಸಲಾಗುತ್ತದೆ.

ವಿರೂಪಾಕ್ಷಯ್ಯನವರ ತಂದೆ ಶಿವಲಿಂಗಯ್ಯ ಮಠಪತಿಯವರು ಕೂಡ ನಾಟಕದಲ್ಲಿ ಪಾತ್ರ ಮಾಡುತ್ತಿದ್ದರು. ಸಂಗೀತ ಕಲಿತು ಕೆಲ ನಾಟಕಗಳನ್ನು ನಿರ್ದೇಶಿಸಿದರು.ಪ್ರಥಮವಾಗಿ ರಾಜಾ ಹರಿಶ್ಚಂದ್ರ ನಾಟಕದಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದರು. ಇದರಲ್ಲಿ ಸ್ವತಃ ಹರಿಶ್ಚಂದ್ರನ ಪಾತ್ರ ವಹಿಸಿದ್ದರು. ಕಂಟೆಪ್ಪ ಚಿಕ್ಕುರ್ತೆ ಲೋಹಿತಾಶ್ವನ ಪಾತ್ರ ಸಮರ್ಥವಾಗಿ ನಿರ್ವಹಿಸಿದರು. ನಂತರದಲ್ಲಿ ಚಳಕಾಪುರದ ಗುರುಪಾದಯ್ಯನವರನ್ನು ಹಾರ್ಮೋನಿಯಂ ಮಾಸ್ತರ್ ಕೆಲಸಕ್ಕಾಗಿ ಕರೆತಂದು 'ಲಿಖಿತ ಲೀಲಾ' ನಾಟಕ ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಗುರುಪಾದಯ್ಯನವರ ಸಖ್ಯ ಬೆಳೆಸಿಕೊಂಡು ಸ್ವತಃ ಶಿವಲಿಂಗಯ್ಯನವರು ಹಾರ್ಮೋನಿಯಂ ಬಾರಿಸುವುದನ್ನು ಕಲಿತರು. ಆದ್ದರಿಂದ ಮುಂದೆ ಇವರೇ 'ಲಿಖಿತ ಲೀಲಾ' ನಾಟಕ ಹಾಗೂ ಲಿಂಗಸೂರಿನವರು ಬರೆದ 'ಬಸವೇಶ್ವರ ನಾಟಕ'ವನ್ನು ಆಡಿಸಿದರು. ಅದಕ್ಕೆ ಸಂಗೀತ ನಿರ್ದೇಶಕರಾದರು.

ಬಸವಣ್ಣೆಪ್ಪ ಕಣಜೆ ಬಸವೇಶ್ವರ ಪಾತ್ರದಲ್ಲಿ ಮಿಂಚಿದರು. ಪಂಚಯ್ಯಾ ಪತ್ರಿ ಕಿನ್ನರಿ ಬೊಮ್ಮಯ್ಯನ ಪಾತ್ರದಲ್ಲಿ ಹಾಗೂ ಕಂಟೆಪ್ಪ ಚಿಕ್ಕುರ್ತೆ ಕಿರಿಯ ಬಸವಯ್ಯನ ಪಾತ್ರದಲ್ಲಿ ಕಂಗೊಳಿಸಿದರು. ನಾಟಕ ಕಲಿಸುವುದರೊಂದಿಗೆ ಶಿವಲಿಂಗಯ್ಯನವರು ಭಜನೆ, ಕೋಲಾಟ ಕಲಿಸುತ್ತ ಮೇಲಗಲ್ಲಿಯ ಹಾರ್ಮೋನಿಯಂ ಮಾಸ್ತರರಾದರು. ಆಗ ನೀವೇ ನಾಟಕ ಬರೆದು

ಆಡಿಸಿರಿ ಎಂಬ ಒತ್ತಡ ಹೆಚ್ಚಾಯಿತು. ಆದ್ದರಿಂದ ಶಿವಲಿಂಗಯ್ಯನವರು 'ಸತಿಯ ಸತ್ವಪರೀಕ್ಷೆ' ಎಂಬ ನಾಟಕವನ್ನು ಡಪ್ಪಿನ ಚಾಲಿನಲ್ಲಿ ಕೂಡಿಸಿ ಸ್ವತಃ ಹಾಡುಗಳನ್ನು ರಚಿಸಿ ಬರೆದುಕೊಟ್ಟರು. ಮಾಳಿಂಗರಾಯ ಎಂಬ ಡಪ್ಪಿನ ಪದ್ಯ ಕೂಡ ಬರೆದು ಕೊಟ್ಟರು. ಗ್ರಾಮಸ್ಥರು ಹರ್ಷದಿಂದ ಈ ನಾಟಕ ಆಡಿದರು. ನೋಡುಗರು ಚಪ್ಪಾಳೆತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. ಎಲ್ಲೆಡೆ ವ್ಹಾ, ವ್ಹಾ ಎಂಬ ಉದ್ಗಾರ ಕೇಳಿಬಂತು. ಈ ಕಾರ್ಯದಿಂದ ಗ್ರಾಮದಲ್ಲಿ ಶಿವಲಿಂಗಯ್ಯನವರ ಮಾನ ಮರ್ಯಾದೆ ಹೆಚ್ಚಿತು.

ಅತ್ತ ಕೆಳಗಲ್ಲಿಯವರು ಕೂಡ ನಾವೇನು ಯಾವುದಕ್ಕೂ ಕಮ್ಮಿಯಿಲ್ಲ ಎಂದು ವಿವಿಧ ನಾಟಕಗಳನ್ನು ಆಡಿಸಿದರು. ಗಾಯಕರಾದ ಗುಂಡು ಭಟಜಿ, ರೇವಪ್ಪ ಹೂಗಾರ ಅವರ ನೇತೃತ್ವದಲ್ಲಿ ನಾಟಕಗಳು ನಡೆದವು. ಇವರು ಪ್ರಥಮವಾಗಿ ಪುಂಗಿ ಊದುತ್ತ, ಮೃದಂಗ ಬಾರಿಸುತ್ತ ದೊಡ್ಡಾಟ ಆಡಿಸಿದರು. ಇವರೂ ಮೇಲಗಲ್ಲಿಯವರಂತೆ 'ರಾಜಾ ಹರಿಶ್ಚಂದ್ರ' ನಾಟಕ ಕಲಿತು ಪ್ರದರ್ಶಿಸಿದರು.

ಅಪ್ಪಾರಾಯ ಮಮ್ಮಾ, ಭದ್ರಪ್ಪ ಕನಕಟ್ಟೆ, ಮಹಾರುದ್ರಪ್ಪ ಮಮ್ಮಾ, ಗುರುಬಸಯ್ಯಾ ಮಠ ಇವರೆಲ್ಲ ಕೂಡಿಕೊಂಡು 'ಹರಿಶ್ಚಂದ್ರ' ನಾಟಕವಾಡಿದರು. ಅದಾದಮೇಲೆ 'ಪ್ರಭು ವಿಜಯ' ನಾಟಕ ನಡೆಯಿತು. ಗುರಪ್ಪ ರೇವಪ್ಪ ಹೂಗಾರ ಉತ್ತಮ ಸಂಗೀತಗಾರ ಎಂದು ಗುರುತಿಸಿಕೊಂಡಿದ್ದರು. ನಾಟಕದ ಹಾಡುಗಳನ್ನು ಬರೆದರು. ತಾವೇ ತಬಲಾ ಬಾರಿಸುತ್ತಿದ್ದರು. 'ಲಂಕಾದಹನ' ಹಾಗೂ 'ದ್ರೋಪತಿಯ ವಸ್ತ್ರಾಪಹರಣ' ನಾಟಕಗಳನ್ನು ಕೂಡ ನಿರ್ದೇಶಿಸಿ ಜನಮೆಚ್ಚುಗೆ ಗಳಿಸಿದ್ದರು.

ಹೀಗೆ ಎರಡೂ ಗಲ್ಲಿಗಳಲ್ಲಿ ಒಂದಾದಮೇಲೊಂದು ನಾಟಕಗಳು ನಡೆಯುತ್ತಿದ್ದವು. ಮೇಲಗಲ್ಲಿಯ ಶಿವಲಿಂಗಯ್ಯನವರು ಮುಂದೆ ಪ್ರಸಿದ್ಧ ಸಂಗೀತಗಾರ ವಝೇಬುವಾ ಅವರ ಶಿಷ್ಯ ಗಡಿಗೌಡಗಾಂವದ ನೂರಂದಯ್ಯ ಸ್ವಾಮಿಗಳನ್ನು ಗ್ರಾಮಕ್ಕೆ ಕರೆತಂದು 'ಬಿ.ಎ' ಹಾಗೂ 'ಅರ್ಜುನ ವಿಜಯ' ನಾಟಕಗಳನ್ನು ಆಡಿಸಿದರು.

ಅಂಬರ, ಕಂಟೆಪ್ಪ ಚಿಕ್ಕುರ್ತೆ, ಅಪ್ಪಾರಾಯ ಪೊಲೀಸ್ ಪಾಟೀಲ, ವೀರಪ್ಪ ಯರನಾಳೆ, ರಾಚಪ್ಪ ಕಣಜೆ, ಲಿಂಗಶೆಟ್ಟೆಪ್ಪ ಪಾಟೀಲ ಹೊನ್ನಳ್ಳಿ,

ಮಾದಪ್ಪ ಗುರಪ್ಪ ಜಗಶೆಟ್ಟಿ, ಶಂಕರೆಪ್ಪ ಸಜ್ಜನಶೆಟ್ಟಿ, ಗುರಪ್ಪ ಬೊಂದೆ, ಇಸಾಮೊದ್ದೀನ್, ಕೊಂಡುಪಂತರಾವ್ ಪಟವಾರಿ, ರಾಮಶೆಟ್ಟಿ ಪಟ್ನೆ, ಕಾಶಪ್ಪ ಶರಣಪ್ಪ ಕನಕಟ್ಟೆ, ಮಾಣಿಕಪ್ಪ ಹೊನ್ನಳ್ಳಿ, ನಾಗಯ್ಯ ಸಂಗಯ್ಯ ಪಟವಾದಿ, ಗುರಪ್ಪ ಹೂಗಾರ, ವೀರಭದ್ರಪ್ಪ ರಾಜೇಶ್ವರೆ, ರಾಚಯ್ಯ ಮಠಪತಿ, ಮಹಾರುದ್ರಪ್ಪ ರಾಜೇಶ್ವರೆ, ಧೂಳಪ್ಪ ಬಡಿಗೇರ, ಮಾಣಿಕಪ್ಪ ಬಡಿಗೇರ, ಕಾಶಪ್ಪ ಭದ್ರಪ್ಪ ಕನಕಟ್ಟೆ, ಸಂಗಪ್ಪ ಮಾದಪ್ಪ ಮಮ್ಮಾ, ಶಂಕರೆಪ್ಪ ಮಡೆಪ್ಪ ಪತಂಗೆ, ಅಣ್ಣಪ್ಪ ಶಾಂತಪ್ಪ ಬಿರಾದಾರ, ಹಾವಗೆಪ್ಪ ಶಾಂತಪ್ಪ ರಾಜೋಳೆ, ನಿರಂಜನಪ್ಪ, ಶರಣಪ್ಪ ಗೌರೆ, ಮಾದಪ್ಪ ಪೊಲೀಸ್ ಪಾಟೀಲ, ಮಲ್ಲಿಕಾರ್ಜುನ ಚಿಕ್ಕುರ್ತೆ, ಮಾದಪ್ಪ ಗುರಪ್ಪ ಜಗಶೆಟ್ಟಿ, ಕಂಟೆಪ್ಪ ಪತಂಗೆ ಮುಂತಾದವರು ಗ್ರಾಮದಲ್ಲಿ ಪ್ರದರ್ಶಿಸಿದ ನಾಟಕಗಳಲ್ಲಿ ನಟಿಸಿದವರು. ಊರಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಒಬ್ಬಿಬ್ಬರಾದರೂ ನಾಟಕದಲ್ಲಿ ಪಾತ್ರವಹಿಸಿದರು ಇದ್ದರು.

ನೂರಂದಯ್ಯನವರು ಸಂಗೀತದ ಗುರುಗಳಾದರು

ಶಿವಲಿಂಗಯ್ಯನವರು ನಾಟಕ ಆಡಿಸುವುದಕ್ಕೆ ಊರಿಗೆ ಕರೆದುಕೊಂಡು ಬಂದಿದ್ದ ಗಡಿಗೌಡಗಾಂವದ ನೂರಂದಯ್ಯನವರು ವಿರೂಪಾಕ್ಷಯ್ಯನವರಿಗೆ ಮೊದಲ ಗುರುಗಳಾದರು. ಶಿವಲಿಂಗಯ್ಯನವರು ತಮ್ಮ ಇಬ್ಬರು ಮಕ್ಕಳಿಗೆ ಸಂಗೀತ ಕಲಿಸಬೇಕು ಎಂದು ನೂರಂದಯ್ಯನವರಿಗೆ ಆಗ್ರಹಿಸಿದಾಗ ಅವರು ಸಹರ್ಷದಿಂದ ಒಪ್ಪಿಕೊಂಡರು. ದೊಡ್ಡ ಮಗ ರೇವಣಯ್ಯಗೆ ಹಾರ್ಮೋನಿಯಂ ಹಾಗೂ ಕಿರಿಯ ಮಗ ವಿರೂಪಾಕ್ಷಯ್ಯನವರಿಗೆ ತಬಲಾ ಕಲಿಸಲು ಬಿನ್ನವಿಸಿದರು. ಅದರಂತೆ ಹಾರ್ಮೋನಿಯಂ ಹಾಗೂ ತಬಲಾಕ್ಕೆ ಪೂಜೆ ಸಲ್ಲಿಸಿ ಕಲಿಕೆ ಆರಂಭಿಸಲಾಯಿತು.

ಇವರಲ್ಲಿ ಸಂಗೀತ ಕಲಿಯುವ ಆಸಕ್ತಿ ಎಷ್ಟು ಹೆಚ್ಚಾಯಿತೆಂದರೆ ವಿರೂಪಾಕ್ಷಯ್ಯನವರ ಹಿರಿಯ ಸಹೋದರ ರೇವಣಯ್ಯ ಹಾಗೂ ಗ್ರಾಮದ ಇನ್ನೊಬ್ಬ ರಾಚಯ್ಯ ಎನ್ನುವವರು ಸಂಗೀತ ಕಲಿಯುವುದಕ್ಕಾಗಿ ಮನೆಯಲ್ಲಿ ತಂದೆತಾಯಿಗೆ ಹೇಳದೆ ಕೇಳದೆ ಹಾನಗಲಕ್ಕೆ ಹೋದರು. ಮಕ್ಕಳು ಹೇಳದೆ ಕೇಳದೆ ಎಲ್ಲಿಗೆ ಹೋದವೋ ಎಂದು ಇಬ್ಬರ ತಂದೆತಾಯಿಯೂ ಚಿಂತಾಕ್ರಾಂತರಾದರು. ಐದಾರು ತಿಂಗಳ ನಂತರ ಈ ಇಬ್ಬರೂ ಹಾನಗಲ್ಲಿನ ಶಿವಯೋಗ ಮಂದಿರಕ್ಕೆ ಹೋಗಿದ್ದಾರೆ ಎಂಬುದು ಗೊತ್ತಾಯಿತು.

ನಾಗಯ್ಯ ಪಟವಾದಿ ಎನ್ನುವವರನ್ನು ಅಲ್ಲಿಗೆ ಕಳುಹಿಸಿ ಈ ಇಬ್ಬರನ್ನೂ ಗ್ರಾಮಕ್ಕೆ ಕರೆತರಲಾಯಿತು. ಆಗ ಮತ್ತೆ ನಾಟಕ ಆಡಿಸುವುದು ಆರಂಭವಾಯಿತು. ಹೇಮರೆಡ್ಡಿ ಮಲ್ಲಮ್ಮ ನಾಟಕವಾಡಿ ಅದರಲ್ಲಿನ ಮಲ್ಲಮ್ಮನ ಪಾತ್ರವನ್ನು ಕೆಳಗಲ್ಲಿಯ ವಿರೂಪಾಕ್ಷಯ್ಯ ಸಿದ್ರಾಮಯ್ಯ ಅವರಿಗೆ ವಹಿಸಲಾಯಿತು. ಅವರು ಸಮರ್ಥವಾಗಿ ನಿರ್ವಹಿಸಿ ಉತ್ತಮ ಕಲಾಕಾರರೆಂದು ಗುರುತಿಸಿಕೊಂಡರು. ನಾಟಕದ ಹಾರ್ಮೋನಿಯಂ ಮಾಸ್ತರ್ ಆಗಿದ್ದ ರಾಚಯ್ಯನವರಿಂದ ಇವರೂ ಮುಂದೆ ಹಾರ್ಮೋನಿಯ ಕಲಿತರು. ಕೆಲ ನಾಟಕಗಳನ್ನು ಆಡಿಸಿದರು.

ಅಣ್ಣ ರೇವಣಯ್ಯ ಹಾಗೂ ವಿರೂಪಾಕ್ಷಯ್ಯ ಸಂಗೀತದ ಸಾಧಕರಾಗಿ ಹೊರಹೊಮ್ಮಿದ ಹೊತ್ತಲ್ಲೇ ತಂದೆ ಶಿವಲಿಂಗಯ್ಯ ಲಿಂಗೈಕ್ಯರಾದರು. ಮುಂದೆ ಈ ಇಬ್ಬರೂ ಅಣ್ಣತಮ್ಮಂದಿರು ತಬಲಾ ಹಾಗೂ ಹಾರ್ಮೋನಿಯಂ ಮಾಸ್ತರರಾಗಿ ನಾಟಕ ಆಡಿಸುವುದಕ್ಕೆ ಆರಂಭಿಸಿದರು. ವಿರೂಪಾಕ್ಷಯ್ಯನವರು 'ಪಾರ್ವತಿ ಸತ್ವಪರೀಕ್ಷೆ' ಎಂಬ ನಾಟಕ ಬರೆದು ಆಡಿಸಿದರು. ಆಗ ಅಧ್ಯಾತ್ಮದಲ್ಲಿ ವಿಶೇಷ ಸಾಧನೆಗೈದಿದ್ದ ಹಾಗೂ ಯೋಗಗುರು ಎಂದೇ ಪ್ರಸಿದ್ಧರಾಗಿದ್ದ ಮುಚಳಂಬದ ನಾಗಭೂಷಣ ಶಿವಯೋಗಿ ಕೂಡ ಈ ನಾಟಕ ನೋಡಲು ಬಂದಿದ್ದರು. ಉತ್ತಮ ಪ್ರದರ್ಶನ ಕಂಡು ಸಂತಸಗೊಂಡರು.

ಮೇಲಗಲ್ಲಿಯಲ್ಲಿ ಇಂಥ ಚಟುವಟಿಕೆಗಳು ನಡೆಯುತ್ತಿರುವಾಗ ಕೆಳಗಲ್ಲಿಯವರು ಕೂಡ ಸುಮ್ಮನೆ ಕುಳಿತುಕೊಳ್ಳದೆ ರಾಚಯ್ಯಸ್ವಾಮಿ ಅವರ ನೇತೃತ್ವದಲ್ಲಿ 'ರೇಣುಕವಿಜಯ' ನಾಟಕದ ಆಯೋಜನೆ ಮಾಡಿದರು. ವಿರೂಪಾಕ್ಷಯ್ಯ ಸಿದ್ರಾಮಯ್ಯ ಅವರು ಮಾಯಾದೇವಿಯ ಪಾತ್ರ ನಿರ್ವಹಿಸಿದರು. ನಾಗಯ್ಯ ಪಟವಾದಿ ರೇಣುಕನ ಪಾತ್ರ, ವಿಶ್ವನಾಥಯ್ಯ ಬಿಜ್ಜಳನ ಪಾತ್ರ, ಅಡಿವೆಯ್ಯ ಮಠಪತಿ ಮಂತ್ರಿ ಪಾತ್ರ, ಶಂಕರೆಪ್ಪ ಪತಂಗೆ ಗೋರಕ್ಷನಾಥನ ಪಾತ್ರ ಹಾಗೂ ಚನ್ನಯ್ಯ ಚಳಕಾಪುರ ಖರ್ಪರನ ಪಾತ್ರ ನಿರ್ವಹಿಸಿದರು. ರೇಣುಕ ವಿಜಯ ನಾಟಕ ಬಹಳಷ್ಟು ಪ್ರಸಿದ್ಧವಾಯಿತು. ಮನೆ ಮನೆಯಲ್ಲಿ ಈ ಬಗ್ಗೆ ಮಾತುಗಳು ನಡೆದವು. ದೂರದೂರದವರು ನೋಡಲು ಬರುತ್ತಿದ್ದರು.

ಹೈದರಾಬಾದ್ ಕರ್ನಾಟಕ ವಿಮೋಚನೆಯ ನಂತರ

ಭಾರತಕ್ಕೆ ೧೯೪೭ ರಲ್ಲಿ ಸ್ವಾತಂತ್ರ್ಯ ದೊರೆತರೂ ಕಲಬುರ್ಗಿ ವಿಭಾಗದ ಬೀದರ್ ಒಳಗೊಂಡು ಆರು ಜಿಲ್ಲೆಗಳು ಹಾಗೂ ಮಹಾರಾಷ್ಟ್ರದ ಕೆಲ ಜಿಲ್ಲೆಗಳು ಹೈದರಾಬಾದ್ ನ ನಿಜಾಮ ಆಡಳಿತದಲ್ಲಿ ಉಳಿದಿದ್ದವು. ನಿಜಾಮ್ ಅರಸರು ಈ ಭಾಗ ಭಾರತಕ್ಕೆ ಬಿಟ್ಟು ಕೊಡುವುದಿಲ್ಲ ಎಂದು ಹಟ ಹಿಡಿದಿದ್ದರು. ಮುಸ್ಲಿಂ ಸಂಘಟನೆಯ ಕಾರ್ಯಕರ್ತರಾದ ರಜಾಕಾರರು ಅನ್ಯ ಧರ್ಮೀಯರ ಮೇಲೆ ದಬ್ಬಾಳಿಕೆ ನಡೆಸಿದರು. ಜೀವ, ಆಸ್ತಿಪಾಸ್ತಿಗೆ ಹಾನಿಯನ್ನುಂಟು ಮಾಡಿದರು. ಆಗ ಗೋರಟಾದಲ್ಲಿ ಅಪಾರ ಪ್ರಮಾಣದ ಜೀವ ಹಾನಿ ಆಯಿತು. ಹೈದರಾಬಾದ್ ನಲ್ಲಿದ್ದ ಭಾರತ ಸರ್ಕಾರದ ಪ್ರತಿನಿಧಿ ಕೆ.ಎಂ.ಮುನ್ಶಿ ಅವರು ಗ್ರಾಮಕ್ಕೆ ಭೇಟಿನೀಡಿ ಪರಿಶೀಲಿಸಿದರು. ನಂತರದಲ್ಲಿ ಅವರು ಬರೆದ 'ದ ಎಂಡ್ ಆಫ್ ಆನ್ ಯರಾ' ಗ್ರಂಥದಲ್ಲಿ ಇಲ್ಲಿನ ಹಾನಿಯ ವಿವರವಿದೆ.

ಈ ಭಾಗದ ವಿಮೋಚನೆಗೆ ದೊಡ್ಡ ಹೋರಾಟವೇ ನಡೆಯಿತು. ೧೯೪೮ ರ ಸೆಪ್ಟೆಂಬರ್ ೧೭ ರಂದು ಈ ಭಾಗ ಭಾರತದಲ್ಲಿ ವಿಲೀನವಾಯಿತು. ಕೇಂದ್ರ ಗೃಹ ಸಚಿವರಾಗಿದ್ದ ಸರ್ದಾರ ವಲ್ಲಭಬಾಯಿ ಪಟೇಲ್ ಅವರು ಧೈರ್ಯದಿಂದ ದಿಟ್ಟ ನಿರ್ಧಾರ ತೆಗೆದುಕೊಂಡು ಹೈದರಾಬಾದ್ ನಿಜಾಮ್ ಸೈನ್ಯದ ವಿರುದ್ಧ ಪೊಲೀಸ್ ಆ್ಯಕ್ಷನ ಎಂದೇ ಜನಮಾನಸದಲ್ಲಿ ನೆನಪು ಉಳಿದಿರುವ 'ಆಪರೇಷನ್ ಪೋಲೊ' ಸೈನಿಕ ಕಾರ್ಯಾಚರಣೆ ನಡೆಸಿದರು. ಜನರಲ್ ಜೆ.ಎನ್.ಚೌಧರಿ ಅವರ ನೇತೃತ್ವದಲ್ಲಿ ನಿಜಾಮ ಆಡಳಿತದ ಸರಹದ್ದು ಆಗಿದ್ದ ಈಗಿನ ಮಹಾರಾಷ್ಟ್ರದ ಸೊಲ್ಲಾಪುರಕ್ಕೆ ಸಮೀಪದ ನಳದುರ್ಗ ಹಾಗೂ ಹೈದರಾಬಾದ್ ನ ಇತರೆ ನಾಲ್ಕು ಕಡೆಗಳಿಂದ ಒಮ್ಮೆಲೆ ದಾಳಿ ನಡೆಸಿ ಈ ಸಂಸ್ಥಾನವನ್ನು ಆಧೀನಕ್ಕೆ ತೆಗೆದುಕೊಂಡರು. ಹೀಗಾಗಿ ನಿಜಾಮನು ಶರಣಾಗಿ ಭಾರತದಲ್ಲಿ ತಮ್ಮ ಸಂಸ್ಥಾನ ವಿಲೀನಗೊಳಿಸಲು ಒಪ್ಪಿಕೊಂಡನು.

ಹೀಗೆ ಎಲ್ಲೆಡೆ ಅರಾಜಕತೆ ಉಂಟಾಗಿದ್ದರಿಂದ ಗೋರಟಾದಲ್ಲಿನ ಕೆಲವರ್ಷ ನಿಂತುಹೋಗಿದ್ದ ನಾಟಕದ ಚಟುವಟಿಕೆಗಳು ನಂತರದಲ್ಲಿ ಮತ್ತೆ ಆರಂಭಗೊಂಡವು. ಕೆಳಗಲ್ಲಿ ವಿರೂಪಾಕ್ಷಯ್ಯ ಹಾಗೂ ಮೇಲಗಲ್ಲಿ

ವಿರೂಪಾಕ್ಷಯ್ಯನವರು ಸಂಗೀತದಲ್ಲಿನ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೈದರಾಬಾದ್ ಗೆ ಹೋದರು. ವಿರೂಪಾಕ್ಷಯ್ಯ ಶಿವಲಿಂಗಯ್ಯನವರು ಪಿಟೀಲು ವಾದನದಲ್ಲಿ ಸಂಗೀತ ವಿಶಾರದ ಪಾಸಾದರೆ ವಿರೂಪಾಕ್ಷಯ್ಯ ಶಿವಲಿಂಗಯ್ಯನವರು ಸೀತಾರ ವಾದನದಲ್ಲಿ ಅಲಂಕಾರ ಪರೀಕ್ಷೆ ಪಾಸಾದರು. ನಂತರ ಗ್ರಾಮಕ್ಕೆ ಬಂದ ಈ ಇಬ್ಬರೂ ಸಂಗೀತರುದ್ರ ಪೂಜೆ ಮಾಡುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

೧೯೫೮ ರಲ್ಲಿ ಗ್ರಾಮದಲ್ಲಿ ಹೈದರಾಬಾದ್ ಕರ್ನಾಟಕ ವಿಭಾಗೀಯ ಮಟ್ಟದ ಬೃಹತ್ ಸಂಗೀತ ಸಮ್ಮೇಳನ ಕೂಡ ಆಯೋಜಿಸಲಾಗಿತ್ತು. ನಾಗೇಶ ಗಣೇಶ ದಿವಾಣಜಿ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ನಂತರದಲ್ಲಿ ನಾಟಕದ ಚಟುವಟಿಕೆಗಳೂ ಮತ್ತೆ ಗರಿಗೆದರಿದವು. 'ಹದಗೆಟ್ಟ ಹೈದರಾಬಾದ್' ನಾಟಕ ಪ್ರದರ್ಶಿಸಲಾಯಿತು. ಮೇಲಗಲ್ಲಿ ಹಾಗೂ ಕೆಳಗಲ್ಲಿಗಳಲ್ಲಿ ಮತ್ತೆ ನಾಟಕವಾಡಿಸುವಲ್ಲಿ ಸ್ಪರ್ಧೆ ಏರ್ಪಟ್ಟಿತು. ಮೇಲಗಲ್ಲಿಯಲ್ಲಿ ಅತ್ತಿ ಅಳಿಯ, ದೈವಚಿತ್ರ, ಮಂಗಳಗೌರಿ, ಭಕ್ತ ಮಾರ್ಕಂಡೇಯ, ದೇವರಿಗೆ ನೆನಪಿಲ್ಲ ನಾಟಕಗಳು ನಡೆದವು. ಕೆಳಗಲ್ಲಿಯಲ್ಲಿ ಬಾಲಚಂದ್ರ, ಪ್ರಪಂಚ ಪರೀಕ್ಷೆ, ಹೊಸ ಸಂಸಾರ, ರಕ್ತದೀಪ, ನಂದಾದೀಪ, ಹಸಿರು ಬಳೆ ಮುಂತಾದ ನಾಟಕಗಳನ್ನು ಪ್ರದರ್ಶಿಸಲಾಯಿತು.

ಇಷ್ಟೆಲ್ಲ ಚಟುವಟಿಕೆಗಳು ನಡೆದರೂ ರಜಾಕಾರರ ಹಾವಳಿಯಲ್ಲಿ ಗ್ರಾಮದಲ್ಲಿ ಉಂಟಾದ ಹಾನಿ, ನೋವು, ಸಂಕಟಗಳನ್ನು ಮರೆಯುವುದು ಅಸಾಧ್ಯವಾಯಿತು. ಬೆಂಕಿಗೆ ಆಹುತಿಯಾಗಿ ಹಾಳಾದ ಮನೆಗಳು, ಮಠಗಳನ್ನು ನೋಡಿದಾಗ ದುಃಖ ಒತ್ತರಿಸಿ ಬರುತ್ತಿತ್ತು ಎಂದು ಅಂದಿನ ಘಟನೆಗೆ ಸಾಕ್ಷಿಯಾದವರು ನೆನಪು ಮಾಡಿಕೊಂಡು ಈಗಲೂ ಕಣ್ಣೀರು ಸುರಿಸುತ್ತಾರೆ. ಗ್ರಾಮದಲ್ಲಿ ನಡೆದ ರಜಾಕಾರರ ಹಾವಳಿಯನ್ನು 'ಜಲಿಯನವಾಲಾ ಬಾಗ ಹತ್ಯಾಕಾಂಡ' ಎಂದೇ ಕರೆಯಲಾಗುತ್ತದೆ. ಈ ಬಗ್ಗೆ ವಿರೂಪಾಕ್ಷಯ್ಯ ಶಿವಲಿಂಗಯ್ಯ ಹಾಗೂ ವಿರೂಪಾಕ್ಷಯ್ಯ ಸಿದ್ರಾಮಯ್ಯ ಅವರು ಕೂಡಿಕೊಂಡು ಭುಲಾಯಿ ಪದ ರಚಿಸಿ ಪ್ರಕಟಿಸಿದರು. ಅವರು ಬರೆದ ಭುಲಾಯಿ ಪದ ಹೀಗಿದೆ.

ಶ್ರೀಗುರು ಗೋರಖನಾಥ
ವೈರಾಗ್ಯಶಾಲಿವಂತ, ಭಕ್ತರಿಗೆ ಒಲಿಯೋ ಸನ್ಯಸ್ಥ
ಕೋಲೆಣ್ಣ ಕೋಲ

ಹೈದರಾಬಾದಿನ ಬೀದರ್ ಜಿಲ್ಲಾ, ರಝಾಕಾರ ಪುಂಡರೆಲ್ಲ, ದಂಡೆತ್ತಿ
ಬಂದಾರೋ ಗೋರಟಿಮ್ಯಾಲಾ, ಕೋಲೆಣ್ಣ ಕೋಲ

ಗೋರಟಿ ಸುದ್ದಿಯನ್ನು, ಕೇಳಿರಿ ನೀವಿನ್ನು
ತಿಳಿದ ಮಟ್ಟಿಗೆ ಹೇಳುವೆ ನಾನು, ಕೋಲ

ಗೋರಟಿ ಗ್ರಾಮ ಖಾಸ, ಧನಲಕ್ಷ್ಮಿಯವಾಸ
ಇದರ ಮೇಲೆ ತುರಕರ ಮನಸ, ಕೋಲ

ಹದಿನೆಂಟುನೂರಾ ಎಪ್ಪತ್ತು ಶಾಲಿವಾಹನ ಶತಾಬ್ದಿಯ
ಕ್ರಾಂತಿಯಾಯಿತೋ ಗೋರಟಿಯಲ್ಲಿ, ಕೋಲೆಣ್ಣ ಕೋಲ

ಮಿತಿಚೈತ್ರ ಅಮವಾಸಿ ದಿನ, ಮುಂಜಾನೆ ಸೂರ್ಯಗ್ರಹಣ
ನೇಮಸ್ತ ಮಾಡಿರೋ ಆ ದಿನ, ಕೋಲ

ಹುಮನಾಬಾದ್, ರಾಜೇಶ್ವರ, ಕಲ್ಯಾಣ ಜಹಗೀರ
ನೆರೆದಾರೋ ರಜಾಕಾರ, ಕೋಲೆಣ್ಣ ಕೋಲ

ಕುಂಬಾರ ಚಿಂಚೋಳಿ, ನಾವದಗಿ, ಬ್ಯಾಲಳ್ಳಿ,
ಹೊಂಟಾರೋ ಎಲ್ಲರು ಗೋಳಿ, ಕೋಲೆಣ್ಣ ಕೋಲ
ಹುಣಸನಾಳ, ವರವಟ್ಟಿ ತುರುಕರಿಗಿಲ್ಲ
ಚಿಂದೋಟ್ಟಿ ಗೋರಟಿ ಹೋಗುದು ಮುಂಜಾನೆ ಘಟ್ಟಿ, ಕೋಲ

ಘೋರವಾಡಿ ಮುಖ್ಯಕೇಂದ್ರ ಲಂಗ್ಯಾ ತುರುಕರ ಚೋರ
ಮಾಡ್ಯಾರೋ ಅಲ್ಲಿ ಕರಾರ, ಕೋಲೆಣ್ಣ ಕೋಲ

ತೊಗಲೂರ, ಮುಚಳಂಬಿ, ಬೋರೋಳ, ಮೊರಂಬಿ
ಏನಿಲ್ಲದೆ ಉರದರೋ ಮೈತುಂಬಿ, ಕೋಲ

ಖಾಸೀಮ್ ರಜವಿಯನ್ನು, ಬೋಧಾ ಮಾಡಿದವರನ್ನು, ಎಲ್ಲಾರು
ಕೂಡಿ ಮುಕ್ಕ್ಯಾರು ಮಣ್ಣು, ಕೋಲೆಣ್ಣ ಕೋಲ

ಮುಂಜಾನೆಂಟು ತಾಸಿಗೆ, ದನಕರು ಬಿಡುವುದರೊಳಗೆ,
ಸುರು ಮಾಡ್ಯಾರ ಗೋಲಿಬಾರು, ಕೋಲ

ಊರೊಳಗಿನ ಜನರೆಲ್ಲ, ಏರ‍್ಯಾರೋ ಮಾಳಿಗಿ ಮ್ಯಾಲ
ಮುಂದಿನ ಆಸೆ ಒಬ್ಬರಿಗಿಲ್ಲ, ಕೋಲ

ಜೀವ ಹೋದರ ಪರವಿಲ್ಲ. ಓಡಿ ಹೋಗುವವರಲ್ಲ, ಹೀಗೆಂದು
ನುಡುದಾರೋ ಹಿಂದುರೆಲ್ಲ, ಕೋಲೆಣ್ಣ ಕೋಲ

ಈ ಶಬ್ದ ತುರುಕರು ಕೇಳಿ, ಹಾಕ್ಯಾರೋ ಮತ್ತಿಷ್ಟು ಗೋಲಿ
ಮಳಿ ಸುರದಂಗ ಬಂದೂಕ ಗೋಲಿ, ಕೋಲ

ಡುಮಣೆ ಸಾಹುಕಾರರ, ಮಾಳಿಗಿಮ್ಯಾಲ ಬಿಜಲೋಟಬಾರ ಕಲ್ಲು
ಕವಣೆಯ ಜೋರ. ಕೋಲೆಣ್ಣ ಕೋಲ

ಈ ಕ್ರಾಂತಿ ಕಾರ್ಯದೊಳಗೆ, ಹೆಣ್ಣುಮಕ್ಕಳು ಆವಾಗ
ಟೊಂಕಕಟ್ಟಿ ನಿಂತರು ಮೇಲೆ, ಕೋಲೆಣ್ಣ ಕೋಲ

ಹೆಣ್ಣುಮಕ್ಕಳು ಕಲ್ಲು ಕೊಡುವರು, ಗಂಡಸರು ಹೊಡೆಯುವರು
ಮೂರು ತಾಸು ಹಟಸಿದರು. ಕೋಲೆಣ್ಣ ಕೋಲ

ಹಿರೇಮಠದ ಮಾಳಿಗಿಮ್ಯಾಲೆ, ತರುಣ ಜನರು ಅಲ್ಲೆ
ಕವಣೆಯ ಕಲ್ಲು ಜೋರ ಮ್ಯಾಲೆ. ಕೋಲೆಣ್ಣ ಕೋಲ

ಹತಿಯಾರಿದ್ದಿಲ್ಲಿಯವರಲ್ಲಿ ಬರೆ ಕಾವಣೆ ಜೋರಿಲಿ
ಬರಗುಡದಿಲ್ಲ ಒಬ್ಬರಿಗಿ ಬದಲಿ. ಕೋಲೆಣ್ಣ ಕೋಲ

ಏಳೆಂಟು ಮಂದಿ ಜಿತ್ತ ಮಾಡೇರ ಏಕಾಂತ,
ಓಡಿ ಹೋಗುವುದು ವ್ಯರ್ಥ ಕೋಲ

ಇದೇ ಅಭಿಮಾನಕ್ಕೆ ಬಿದ್ದು, ಜೀವ ಹೋದರು ಹೋಯಿತೆಂದು,
ರಾಚಯ್ಯಸ್ವಾಮಿ ಮುಂದೆ ಬಂದು, ಕೋಲ

ರಾಚೋಟಿಸ್ವಾಮಿ ಇವರು, ಗೋರಟಿ ಮಠಪತಿಯವರು,
ತುರುಕನಿಗೆ ಒಂದೇಟು ಕೊಟ್ಟಿದ್ದರು, ಕೋಲ

ಪೆಟ್ಟ ತಿಂದ ತುರುಕನ ಹೆಸರು ಎಮ್ಮಿ ಮಸ್ತಾನ,
ಹೆಚ್ಚಿನ ಸಿಟ್ಟು ತೆಗೆದಿದಾನ. ಕೋಲ

ಕೂತ ಜಾಗ ಬಿಟ್ಟು ಎದ್ದು ಮಠದ ಸಮೀಪದ ಬಂದು
ಬೇಲಿಗೆ ಹಚ್ಚಿದ ಬೆಂಕಿ ತಂದು. ಕೋಲ
ಉರಿಯು ಬಹಳ ಎದ್ದಿತ್ತು ದನದನ ಉರಿಯುತ್ತಿತ್ತು
ಊರಸುತ್ತ ಹರಿದಾಡಿತು. ಕೋಲ

ಉರಿಯನ್ನು ನೋಡಿದವರು, ಗಾಬರಿಗೊಂಡರು,
ಡುಮಣೆನ ದೊಡ್ಡಿ ಸೇರಿದರು. ಕೋಲ

ದೊಡ್ಡಿ ಮೇಲಿದ್ದವರು, ಎಂಟು ಹತ್ತು ಶೂರಜನರು
ಬಿಜಲೋಟ ಹತಿಯಾರಾದರು. ಕೋಲ

ನಾಗಪ್ಪ ಹಳೆಂಬರೆ ಈತನು ಬಹದ್ದೂರ,
ಮಹಡಿ ಮೇಲಿನವನ ಜೋರ. ಕೋಲ

ತುರುಕರು ಸೇರಿ ಊರೊಳಗೆ, ಮನಸಿಗೆ ಬಂದ್ಹಾಂಗ,
ನಡೆಸಿದರೋ ಹೆಚ್ಚಿನ ದಂಗ. ಕೋಲ

ಸಿಕ್ಕಷ್ಟು ಜನರಿಗೆ, ಹೊಡೆದಾರೋ ಜಗಿಜಗಿ,
ಒಬ್ಬರ ಸುದ್ದಿ ಇಲ್ಲದಂತಾಗಿ, ಕೋಲ

ಆವಾಗ್ಗೆ ರಝಾಕಾರರು, ಹಿರೇಮಠಕ್ಕೆ ಬಂದಿದ್ದರು,
ಬಾಗಿಲ ತೆರೆಯೆಂದಿದರು. ಕೋಲ

ತೆರೆಯಿರಪ್ಪ ಬಾಗಿಲ, ನಿಮಗೇನು ಮಾಡುವುದಿಲ್ಲ.
ಹೀಗಂತರ ರಝಾಕಾರರೆಲ್ಲ. ಕೋಲೆಣ್ಣ ಕೋಲ

ಮಾಡುವರೇನು ಇಲ್ಲಿ, ಮನಸ್ಸಿಗೆ ತಿಳಿದಾನಲ್ಲಿ,
ರಾಚಯ್ಯಸ್ವಾಮಿ ಬಂದಾನಲ್ಲಿ, ಕೋಲ
ಬಾಗೀಲ ತೆರೆಯುವಷ್ಟರಲ್ಲಿ ಹೊಡೆದಾರೋ
ಬರ್ಚಿಲಿ, ನಟ್ಟಿತ್ತೋ ಹೊಟ್ಟೆಯಲ್ಲಿ, ಕೋಲ

ಅಯ್ಯೋ ಶಿವ ಭಗವಂತ, ವ್ಯಾಳೆ ಹೆಂತಾದು ಬಂತ
ಆಯಿತೋ ಈ ದಿನ ಘಾತ. ಕೋಲ

ಎಮ್ಮಿಯ ಮಸ್ತಾನನು, ಅಂಗಳಾಗ ಹಾಕಿದನು,
ಮೈಯೆಲ್ಲ ಗಾಯ ಮಾಡಿದನು, ಕೋಲ

ಏ ಅಯ್ಯ ಮಗನ, ಕಲ್ಲು ಹೊಡೆವವ ನೀನ,
ಹೊಡೆಯುವೆನು ಜೀವ ಹೋಗೋತನ, ಕೋಲ

ರಾಚಯ್ಯ ನೆಲಕ್ಕೆ ಬಿದ್ದು, ತುರುಕನಿಗೆ ಸಿಟ್ಟಿಗೆದ್ದು,
ಬೈದಾನೋ ಮನಸ್ಸಿಗೆ ಬಂದು, ಕೋಲ

ಈ ಶಬ್ದ ತುರುಕ ಕೇಳಿ, ಎದ್ದಾನೋ ಜೋರಿಲಿ,
ಮತ್ತೊಂದು ಹೊಡೆದಾನೋ, ಬೆನ್ನಿನಲ್ಲಿ, ಕೋಲ

ಹೊಟ್ಯಾಗಾಗ್ಯಾದೋ ಬೆಂಕಿ ಬುಕ್ಕುತಾನೋ
ಮಣ್ಣುಫಕ್ಕಿ, ಬಡಕೊಂಡನ ಕೈ ಕಾಲು ತಿಕ್ಕಿ, ಕೋಲ

ವಂದೇ ಮಾತರಂ ಎಂದು ಘೋಷಣೆ ಮಾಡ್ಯಾನೋ ಬಿದ್ದು,
ಜೀವ ಹೋಯಿತು ಆಗ ಅವಂದು, ಕೋಲೆಣ್ಣ ಕೋಲ

ದೇಶಸೇವೆಯ ಋಣಿ, ಮಾತೃ ಭೂಮಿಗೆ- ಧಣಿ,
ಸುಜ್ಞೇರು ಹೇಳಿದಿ ಆಗ ಅವಂದು, ಕೋಲ

ಶಂಕರೆಪ್ಪ ಪತಂಗೆ, ಇವನಿಗೆ ಹೊಡದಾರಾಗ,
ಇವನ ಸುದ್ದಿ ಕೇಳಿರೀಗ, ಕೋಲ

ಗುಂಡಾಮಂದಿ ಬಂದಾವೆಂದು, ತುರುಕರ ಮನಿಗೆ ಬಂದು,
ಹೆಣ್ಣುಮಕ್ಕಳಿಗೆ ಕೈಕಾಲು ಬಿದ್ದು, ಕೋಲ

ಏ ಯವ್ವಾ ನಮ್ಮವ್ವ, ಮಗನಂತೆ ನಾನವ್ವ,
ಉಳಿಸಿಕೊಳ್ಳರೇ ನನ್ನ ಜೀವ, ಕೋಲೆಣ್ಣ ಕೋಲ

ಮುಸಲ್ಮಾನರ ಹೆಂಗಸರು, ಅವನನ್ನು ಕರೆದೊಯಿದಿದರು,
ಮನೆಯೊಳಗೆ ಅಡಗಿಸಿದರು. ಕೋಲ

ತುರುಕರು ಅಲ್ಲಿಗೆ ಬಂದು ಕೇಳುತಾರೋ ಜೆಬ್ರಿಲಿಂದು
ಹಿಂದೂಗ ಇಟ್ಟರೇನು ತಂದು, ಕೋಲ

ಅದರೊಳಗೆ ಒಂದು ಹೆಂಗಸ, ಹೇಳ್ಯಾಳೋ,
ಬಹು ಸೊಗಸ, ಮನೆಯೊಳಗನ ಒಬ್ಬ ಗಂಡಸ, ಕೋಲ

ಎಲ್ಲಿಟ್ಟರಿ ತೋರಿಸೆಂದು ಮನೆಯೊಳಗೆ ಬಂದು,
ಬಚ್ಚಿದವನಿಗೆ ಹೊಡೆದಾರೊಂದು, ಕೋಲ

ಎಳಕೊಂಡು ತಂದಾರೋ ಹೊರಗ ಕಡಕೊಂಡು ಬಿದ್ದಾನೋ ನೆಲಕ.
ಎದಿಮ್ಯಾಲೇ ಕುತಾನೋ ತುರುಕ, ಕೋಲ

ಅಯ್ಯೋ ಶಿವ ಮಹಾದೇವ ಗತಿ ಏನೋ ಗುರುದೇವ
ಎನಗೆ ತೋರಸೋ ಭಕ್ತ ಬಾಂಧವ, ಕೋಲೆಣ್ಣ ಕೋಲ

ಶಂಕರೆಪ್ಪನಿಗೆ ಪೆಟ್ಟಾ ಹಾಕ್ಯಾರೋ ತಲವಾರದ ಏಟು
ಕಡದಾವೋ ಕೈಕಾಲು ಬಟ್ಟಾ, ಕೋಲ

ಮತ್ತೊಬ್ಬ ಹಿಂದೆ ಬಂದು, ಹೊಡದಾನೊ
ಬರ್ಚಿಲಿಂದು ಬಿದ್ದಾನೋ ಆಮ್ಯಾಲೆ. ಕೋಲ

ಅಲ್ಲಿಂದವನಿಗೆ ಪೆಟ್ಟಾ ಹಾಕ್ಯಾರೋ ಬೇಕಾದಷ್ಟು
ಜೀವ ಹೋಯಿತೆಂದು ಹೋಗ್ಯಾರೋ ಹೊಂಟು, ಕೋಲ

ತಾಸ ಹೊತ್ತಿನಾ ಮ್ಯಾಲೆ, ಸ್ಮೃತಿ ಬಂತೋ ದೇಹದ ಮ್ಯಾಲೆ
ಮನಿಗೆ ಹೋಗ್ಯಾನೋ ಆ ಮ್ಯಾಲೆ, ಕೋಲ

ದೇವರ ಮನಿಯೊಳಗೆ ಅಡಗಿಕೂತಾನೋ ಆಗೆ
ದೇವರ ಧ್ಯಾನ ಮನದೊಳಗೆ, ಕೋಲೆಣ್ಣ ಕೋಲ

ತುರುಕರು ಬಂದಿದ್ದರು, ಮನೆಯೊಳಗೆ ಸೇರಿದ್ದರು
ಪ್ರತ್ಯಕ್ಷ ಅವನಿಗೆ ನೋಡಿದರು, ಕೋಲ

ಎಳೆ ತಂದಾರೋ ಅಂಗಳಾಗ, ಹಾಕ್ಯಾರೋ ಕಣಕಿಯೊಳಗ
ಹಚ್ಚ್ಯಾರೋ ಬೆಂಕಿ ಆಗ, ಕೋಲ

ಆಮೇಲೆ ರಝಾಕಾರರು ಜೀವ ಹೋಯಿತೆಂದಿದರು
ಮನೆ ಹೊರಗೆ ಒಗಿದರು, ಕೋಲ

ಗುರುವಿನ ಕೃಪೆಯಿಂದ ಉರಿಯೊಳಗಿಂದ,
ಶಂಕರೆಪ್ಪ ಬದುಕಿ ಬಂದ, ಕೋಲ

ಬಸಪ್ಪ ಇವರು, ಮಾಲಿಯ ಗೌಡರು
ಸೀರಿಯ ಉಟ್ಟು ಕೂತಿದ್ದರು, ಕೋಲ

ತುರುಕರು ಬಂದಿದ್ದರು, ಎಳಕೊಂಡು
ತಂದಿದಾರು ಲಕ್ಷ್ಮಿಗುಡಿ ಮುಂದೆ ಕೊಂದಿದರು, ಕೋಲ

ಬಸಪ್ಪ ಪೊಲೀಸಗೌಡ, ಅಣ್ಣತಮ್ಮಂದಿರು ಜೋಡ
ತುರುಕರು ಇಲ್ಲಿಗೆ ಬಂದಾರೋ ದೌಡ, ಕೋಲ

ಗೌಡ ಹಿರಿಯಣ್ಣನು, ಸೀರಿ ಉಟ್ಟಕೊಂಡಿದ್ದನು
ತಾಯಿಯ ಬಳಿಯಲ್ಲಿ ಕೂತಿದ್ದನು. ಕೋಲ

ಮೋಸಮಾಡಿ ತುರುಕರು ಗೌಡನ ಬಳಿ ಬಂದಿದ್ದರು
ಕೈ ಹಿಡಿದು ಎಳೆದರು. ಕೋಲ

ಗೌಡನ ತಾಯಿಯವಳು ಬೇಡಿದ ದ್ರವ್ಯ ಕೊಟ್ಟಿದ್ದಳು
ಜೀವದಾನ ಬೇಡಿದಳು. ಕೋಲ

ನಿನ್ನ ಮಗನಿಗೆ ಹೊಡೆಯುವುದಿಲ್ಲ
ಮಗನಂತೆ ನಾವೆಲ್ಲ, ಹೀಂಗಂತರ ತುರುಕರೆಲ್ಲ, ಕೋಲ

ಗೌಡನ ಕೈಹಿಡಿದು, ಎಳಕೊಂಡು ಹೊರಗೆ ಬಂದು
ಹೊಡದಾರೋ ಬಂದೂಕಲಿಂದು, ಕೋಲ

ತಾಯಿ ಎದ್ದಾಳಲ್ಲಿಂದು, ಧಾವಿಸಿ ಮುಂದೆ ಬಂದು
ಶವ ನೋಡಿ ಕಡಕೊಂಡ ಬಿದ್ದು, ಕೋಲ

ಇವನಿಗೆ ನೋಡುವಷ್ಟರಲ್ಲಿ, ಸಣ್ಣವನಿಗೂ ಹೊಡೆದಾರಲ್ಲಿ
ತಾಯಿ ನೋಡ್ಯಾಳೋ ಕಣ್ಣಿಲಿ, ಕೋಲ

ದುಃಖಿಸುತ್ತ ಬಿದ್ದಳು, ಶವದ ಮೇಲೆ ಉರುಳಿದಳು
ಮಗನ ಧ್ಯಾನ ಮನದೊಳು, ಕೋಲೆಣ್ಣ ಕೋಲ

ಗುರುಪಾದಪ್ಪ ಪೊಲೀಸಗೌಡ, ಗಾಬರಿಯಾಗಿ ಓಡ್ಯಾನ ದೌಡ,
ಕಡದಾರೋ ಇವನಿಗೆ ತುಂಡ, ಕೋಲ

ರಾಮರಾವ್ ಕುಲಕರ್ಣಿ, ದೇಶಸೇವೆಯ ಋಣಿ,
ಮಾತೃಭೂಮಿಗೆ ಧಣಿ, ಕೋಲ

ನಾರಾಯಣ ಮುಕ್ತೇದಾರ, ಚನ್ನಪ್ಪ ಬಿರಾದಾರ,
ಇವರಿಗೆ ಹೊಡೆದಾರೋ ಠಾರ, ಕೋಲ

ಗೋರಟ ಊರೊಳಗೆ, ಹೊಡೆದಿದ ಜನರಿಗೆ,
ಲೆಕ್ಕ ಹತ್ತಿಲ್ಲೋ ಆವಾಗ, ಕೋಲ

ನಡೆದಾರೋ ದಂಗೆಚೋರ, ರಾತ್ರಿ ಮೂರನೇ ಪ್ರಹರ
ಆಗ್ಯಾರೋ ಎಲ್ಲರೂ ಫರಾರ, ಕೋಲ

ಗೋರಟ ಉರಿಯುವುದೆಲ್ಲ, ಹನ್ನೆರಡು ಮೈಲಿನ ಮ್ಯಾಲ
ಕಾಣ್ಯಾದೋ ಅವರಿಗೆಲ್ಲ, ಕೋಲ

ನೋಡಿದ ಜನರೆಲ್ಲ, ನುಡಿತಾರೋ ಹೀಗೆಲ್ಲ
ಹೀಗೆಂದೂ ಅಗ್ನಿ ನೋಡಿಲ್ಲ, ಕೋಲ

ಗೋರಟ ಸುದ್ದಿ ತಾರ, ದೆಹಲಿಗೆ ಹೋಗ್ಯಾವೋ ನೂರ,
ನೆಹರೂ ತೆಗೆದಾರ ಕಣ್ಣೀರ, ಕೋಲ

ಈ ಮಂದಿ ಅಡವಿಬಿದ್ದು, ಹೋಗ್ಯಾರೋ ಮುಂಬಯಿ ಹಿಡಿದು
ಆರು ತಿಂಗಳು ಅಲ್ಲೆಯಿದ್ದು, ಕೋಲ

ಪುಣೆ, ಸೋಲಾಪುರ, ಹೊಟಗಿ, ವಿಜಾಪುರ,
ಗೋರಟಾ ಮಂದಿ ಭರಪೂರ, ಕೋಲ

ಟಿಕ್ಕೆಕರವಾಡಿಯಲ್ಲಿ, ಸದ್ಧರ್ಮ ಗುರುಕುಲದಲ್ಲಿ,
ಓಡಿ ಹೋದವರ ವ್ಯವಸ್ಥಾ ಅಲ್ಲಿ, ಕೋಲ

ಗುರುಕುಲ ಸ್ಥಾಪಕರು, ಸಿದ್ಧವೀರಸ್ವಾಮಿ,
ಬನಹಟ್ಟಿಯವರು, ಅನ್ನ ಛತ್ರ ಇಟ್ಟಿದ್ದರು, ಕೋಲ

ಸಂಸ್ಥೆ ಸಂಚಾಲಕರು, ಸುರೇಶ ಸ್ವಾಮಿಯವರು
ಜನತಾ ಸೇವೆ ಮಾಡಿದರು. ಕೋಲೆಣ್ಣ ಕೋಲ

ಮೇಹಕರ ಪಟ್ಟದ್ದೇವರು, ಗುರು ರಾಚೋಟೇಶ್ವರರು,
ಬಹು ಸಾಹಸ ನೀಡಿದರು. ಕೋಲ

ಗುರುಕುಲ ಕಾರ್ಯಕರ್ತರು
ಕಾಶಿನಾಥ ಸ್ವಾಮಿಗಳು, ಇವರು ಶ್ರಮಪಟ್ಟರು, ಕೋಲ

ವರಹಾಡ ಪ್ರಾಂತದೊಳಗೆ, ಕವಠಳ ಗ್ರಾಮದೊಳಗೆ,
ಈ ಜನರು ಹೋಗ್ಯಾರಲ್ಲಿಗೆ, ಕೋಲ

ಕವಠಳ ಬಳವಂತಪ್ಪ, ಅಣ್ಣನಾದ ಯಶವಂತಪ್ಪ
ಇಬ್ಬರೂ ಸಹಾಯ ನೀಡಿದರು, ಕೋಲ

ಲಾತೂರ ಕಾಸೀಮನು, ಜೋಕುಮಾರನಂತಿಹನು
ರಝಾಕಾರರಾಗಿ ಉರಿದಿದ್ದನು, ಕೋಲ

ನಿಜಾಮ ರಾಜ್ಯದೊಳಗೆ ಹೆಣ್ಣುಮಕ್ಕಳಿಗೆ
ಅತ್ಯಾಚಾರ ಮಾಡಿದರಾಗ, ಕೋಲ

ಭಾರತಾಂಬೆ ನೋಡಿದಳಾಗ, ವನಿತೆಯರ ಮಾನಭಂಗ
ಸುರುಮಾಡ್ಯಾಳೋ ಸೇಡು ಮುಸಲರಮ್ಯಾಲ, ಕೋಲ

ರಾಜಸ ರಾಕ್ಷಸ ರಾವಣನಂತೆ ಈ ಅರಸ,
ಅವನಂತೆ ಆಗುವದು ಸತ್ಯನಾಶ, ಕೋಲ

ನೆಹರೂ, ರಾಜಾಜಿಯವರು, ವಲ್ಲಭಭಾಯಿ ಪಟೇಲರು,
ಮೂವರು ರಾಯ ಮಾಡಿದರು, ಕೋಲ

ಈ ಕೊಲೆಯ ಸುದ್ದಿ ಹೋಗಿ, ನೆಹರೂ ಮನದೊಳಗೆ ಮರುಗಿ.
ಹಿಂದೂಸ್ಥಾನಿ ಸೈನ್ಯ ತಯಾರಾಗಿ, ಕೋಲ

ಹದಿಮೂರ ಸೆಪ್ಟೆಂಬರ್, ಮಿಲಿಟ್ರಿಯ ತಯ್ಯಾರ,
ನಿಜಾಮ್ ಸುತ್ತ ಹಾಕ್ಯಾರೋ ಘೇರ, ಕೋಲ

ಉಸ್ಮಾನಾಬಾದಿನಲ್ಲಿ, ರಝಾಕಾರ ಮಂದಿ ಅಲ್ಲಿ,
ಬಂದಾರೋ ಮಿಲ್ಟ್ರೀ ಜೋರಿಲಿ, ಕೋಲ

ಐದು ನಿಮಿಷದೊಳಗೆ, ಈ ರಝಾಕಾರರಿಗೆ
ಹಾಕ್ಯಾರೋ ಕಣಕಿ ಸುಡೀನ ಹಾಗೆ, ಕೋಲ

ಅಲ್ಲಿಂದ ವಿಜಯ ಗೆದ್ದು, ನಳದುರ್ಗಕ್ಕೆ ಬಂದು,
ಬಿಟ್ಟಾರೋ ಬಾಂಬ್ ಒಂದು ಕೋಲ,

ಅಲ್ಲಿಂದ ತುರುಕರೆಲ್ಲ, ಅಂತಾರೋ ಅಲ್ಲಾ
ಖಾಸೀಮ್ ರಜವಿ ಮ್ಯಾಲಕಲ್ಲ, ಕೋಲೆಣ್ಣ ಕೋಲ

ಕಲ್ಯಾಣ ಜಹಗೀರ, ಅಲ್ಲಿದ್ದ ರಝಾಕಾರ, ಘುನ್ನ ಟೋಪಿ
ಹಾರ್ಯಾರೋ ಫರಾರ, ಕೋಲ

ರಾಸೂರ, ಹುಮನಾಬಾದ, ಬೀದರ್, ಜಹೀರಾಬಾದಿ
ಹೋಗ್ಯಾರೋ ಹೈದರಾಬಾದಿ, ಕೋಲ

ಮೂರು ದಿವಸದೊಳಗೆ, ನಿಜಾಮ ರಾಜ್ಯದೊಳಗೆ
ತಿರಂಗಿ ಧ್ವಜ ಮೆರದಿತಾಗೆ, ಕೋಲ

ರಾಮಚಂದ್ರನಂತೆ ಇವರು ರಝಾಕಾರರಿಗೆ ನೆಹರೂ
ನಿರ್ಮೂಲ ಮಾಡಿದರು. ಕೋಲ

ಗೋರಟ ಜನರಿಗೆ, ನೆಹರೂಜಿ ಆವಾಗೆ
ಆಜ್ಞೆ ಮಾಡಿದವರಾವಾಗೆ, ಕೋಲ

ಹೈದರಾಬಾದ್ ವಿಜಯವಾಯಿತ್ತು,
ವಿಜಯದಶಮಿಯ ಬಂತು, ಧ್ವಜ ಏರಿತ್ತು, ಕೋಲ

ಸರ್ವಧಾರಿ ಸಂವತ್ಸರ, ಪದ ಮುಗಿಯಿತು.
ಗುರುವಾರ ಕವಿಕೃತ ವಿರೂಪಾಕ್ಷಾ ವೀರ, ಕೋಲೆಣ್ಣ ಕೋಲ.

ವಿರೂಪಾಕ್ಷಯ್ಯ ಶಿವಲಿಂಗಯ್ಯನವರ ಸಾಹಿತ್ಯಕೃಷಿ

ವಿರೂಪಾಕ್ಷಯ್ಯ ಶಿವಲಿಂಗಯ್ಯನವರು ಓದಿದ್ದು ಬರೀ ನಾಲ್ಕನೇ ತರಗತಿಯವರೆಗೆ ಆದರೂ, ಸಾಹಿತ್ಯ ಕೃತಿಗಳನ್ನು ರಚಿಸಿ ಮಹತ್ವದ ಕಾರ್ಯಗೈದಿದ್ದಾರೆ. ಇವರು ಹಾಗೂ ವಿರೂಪಾಕ್ಷಯ್ಯ ಸಿದ್ರಾಮಯ್ಯನವರು ಜತೆಯಾಗಿ ರಚಿಸಿದ ಗೋರಟಾದಲ್ಲಿನ ರಜಾಕಾರರ ಹಾವಳಿಯ ಬಗ್ಗೆ ಸವಿಸ್ತಾರ ಮಾಹಿತಿಯುಳ್ಳ 'ಭುಲಾಯಿಪದ' ಈ ಭಾಗದ ಪ್ರಥಮ ಪ್ರಕಟಿತ ಪುಸ್ತಕವಾಗಿದೆ.

ಇದರಲ್ಲಿ ೧೯೪೮ ರಲ್ಲಿ ನಡೆದ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿ ಹಾಗೂ ರಜಾಕಾರರು ನಡೆಸಿದ ದೌರ್ಜನ್ಯದ ಭೀಕರತೆಯ ಚಿತ್ರಣವಿದೆ. ಈ ಭುಲಾಯಿ ಪದಗಳನ್ನು ಹಾಗೂ ಇತರೆ ವಿಷಯವನ್ನು ಸಂಗ್ರಹಿಸಿ ಈಚೆಗೆ ೨೦೧೪ ರಲ್ಲಿ ವಿರೂಪಾಕ್ಷಯ್ಯ

ಶಿವಲಿಂಗಯ್ಯನವರು 'ಹೈದರಾಬಾದ್ ಕರ್ನಾಟಕ ಜಲಿಯನವಾಲಾಬಾಗ್ ಗೋರಟಾ' ಎಂಬ ಕೃತಿಯನ್ನೂ ಪ್ರಕಟಿಸಿದ್ದಾರೆ.

'ರೇಣುಕ ವಿಜಯ' ನಾಟಕ, 'ಶಿವಲಿಂಗಯ್ಯ ಮಠಪತಿಯವರ ಜೀವನ ಚರಿತ್ರೆ' 'ಕೋಲಾಟದ ಪದಗಳು' ಕೃತಿಗಳನ್ನು ರಚಿಸಿದ್ದಾರೆ. 'ಗುರುಗಾನಸ್ತುತಿ' ಹಾಗೂ 'ಗುರುಗಾನಪ್ರಭೆ' ಇವು ೨೦೦೦ ರಲ್ಲಿ ಪ್ರಕಟಗೊಂಡಿವೆ. ಇದರಲ್ಲಿ ೫೩ ಪದ್ಯಗಳಿವೆ. ಗೋರಟಾದ ಗ್ರಾಮದೈವತ ಗೋರಕ್ಷನಾಥ, ಚಾಂಗಲೇರ ವಿರಭದ್ರೇಶ್ವರ, ಕಲಬುರ್ಗಿಯ ಶರಣಬಸವೇಶ್ವರ, ಮೆಹಕರ ಕಟ್ಟಿಮನಿ ಸಂಸ್ಥಾನದ ರಾಚೋಟಿ ಶಿವಾಚಾರ್ಯ, ವಿಮಲಖೇಡದ ಮಹಾಂತೇಶ್ವರ, ಗುರುಪಾದ ಶಿವಾಚಾರ್ಯ, ಬನಹಟ್ಟಿಯ ಸಿದ್ಧವೀರಸ್ವಾಮಿ ಸಾಲಿಮಠ ಮುಂತಾದ ಜಂಗಮ ಯೋಗಿಗಳ ಗುಣಗಾನ ಈ ಪದ್ಯಗಳ ವಸ್ತುವಾಗಿದೆ. ೨೦೦೭ ರಲ್ಲಿ ಪ್ರಕಟವಾದ 'ಭಕ್ತಿ ಕುಸುಮಾಂಜಲಿ' ಕೃತಿಯಲ್ಲಿಯೂ ೬೭ ಭಕ್ತಿಗೀತೆಗಳಿವೆ.

ರಾಚೋಟಿ ಶಿವಾಚಾರ್ಯ ಮಹಾಸ್ವಾಮೀಜಿಯವರ ಪುರಾಣ ೨೨೪ ಪುಟಗಳದ್ದಾಗಿದೆ. ೧೬ ಸಂಧಿಗಳು, ಜೋಗುಳ, ಮಂಗಳಾರತಿ ಹೊಂದಿದೆ. ೫೦೭ ಷಟ್ಪದಿಗಳಿವೆ. ರಾಚೋಟಿ ಸ್ವಾಮೀಜಿಯವರ ಜನನ, ಬಾಲ್ಯ, ವಿದ್ಯಾಭ್ಯಾಸ, ಮಠಗಳ ಜೀರ್ಣೋದ್ಧಾರ, ಜಪಯಜ್ಞ, ಗ್ರಂಥ ಪ್ರಕಾಶನ ಕಾರ್ಯ, ಸಂಗೀತರುದ್ರ ಸಂಘದ ಸ್ಥಾಪನೆ ಹಾಗೂ ಅವರ ಲೀಲೆಗಳನ್ನು ಸರಳವಾಗಿ ಗ್ರಂಥದಲ್ಲಿ ನಿರೂಪಿತವಾಗಿವೆ. ಕಾಲಗರ್ಭದಲ್ಲಿ ಮರೆತು ಹೋಗಬಹುದಾದ ಅನೇಕ ವಿಷಯಗಳನ್ನು ಲೇಖಕರು ತುಂಬ ಶ್ರಮವಹಿಸಿ ಅತ್ಯಂತ ಶ್ರದ್ಧೆಯಿಂದ ಚಿತ್ರಿಸಿ ಗುರುವಿನ ಕೃಪೆಗೆ ಪಾತ್ರರಾಗಿದ್ದಾರೆ.

ವಿರೂಪಾಕ್ಷಯ್ಯನವರು ರಚಿಸಿದ ಅಪ್ರಕಟಿತವಾದ ಕೋಲಾಟದ ಪದ್ಯವೊಂದು ಹೀಗಿದೆ.

ಇದು ಒಗಟಿನಂತಿದ್ದು ಅರ್ಥಗರ್ಭಿತವಾಗಿದೆ.

ಅಕ್ಕ ಕೇಳೇ ಎನ್ನಯ ಮಾತು
ಚಿಕ್ಕದೊಂದು ಗಿಳಿಯ ಸಾಕಿ ಕೋಲೆಣ್ಣ ಕೋಲ

ದಕ್ಕಲಿಲ್ಲ ವ್ಯಾಳ್ಯಾದೋಳು
ಬೆಕ್ಕಬಂದು ವೈದಿತಕ್ಕ ಕೋಲೆಣ್ಣ ಕೋಲ

ರಾಮರಾಮ ನೆಂಬುವ ಗಿಳಿಯೇ
ಪ್ರೇಮವಾದ ಮಾತಿನ ಗಿಳಿಯೇ ಕೋಲೆಣ್ಣ ಕೋಲ
ದಕ್ಕಲಿಲ್ಲ ವ್ಯಾಳ್ಯಾದೋಳು
ಬೆಕ್ಕಬಂದು ವೈದಿತಕ್ಕ ಕೋಲೆಣ್ಣ ಕೋಲ

ಅಂಗೈಯಲ್ಲಿ ಆಡುವ ಗಿಳಿಯೇ
ಮುಂಗೈಮೇಲೆ ಕುಣಿಯುವ ಗಿಳಿಯೇ ಕೋಲೆಣ್ಣ ಕೋಲ
ಗೊತ್ತುಇಲ್ಲದಂತೆ ಬಂದು
ಗಬಕ್ಕನೆಂದು ವೈದಿತಕ್ಕಾ ಕೋಲೆಣ್ಣ ಕೋಲ

ವಿರೂಪಾಕ್ಷಯ್ಯ ಶಿವಲಿಂಗಯ್ಯನವರು ಗೋರಟಾ ಗ್ರಾಮದೇವರಾದ ಗೋರಕ್ಷನಾಥನ ಮಂಗಳಾರತಿ ಹೀಗೆ ಬರೆದಿದ್ದಾರೆ. ಇದರಲ್ಲಿ ಗೋರಕ್ಷನಾಥನ ಮಹಿಮೆ ಹಾಗೂ ಗೋರಟಾದ ಚರಿತ್ರೆ ಅಡಗಿದೆ.

ಜಯಶ್ರೀ ಗೋರಖನೆ ಜಯ ಮಂಗಲರೂಪನೆ
ಗೋರಟಿ ಗ್ರಾಮಕೆ ನೀನು ಸದಾಕಾಲ ರಕ್ಷಿಪನೆ
ಓಂ ಜಯ ಗೋರಖನೆ

ಆದಿ ಅನಾದಿಯೋಳ ನೀ ಬಂದು ಇಲ್ಲಿ ತಪಗೈದವನೇ
ನಿನ್ನನಾಮವನ್ನಿಟ್ಟು ಗ್ರಾಮ ನಿರ್ಮಿಸಿದಾತನೆ
ಓಂ ಜಯ ಗೋರಖನೆ

ಬಂಗಾಲ ದೇಶದಿ ಚಂದ್ರಗಿರಿ ಗ್ರಾಮದಿ ಪುತ್ರನೀ ಸರಸ್ವತಿಗೆ
ಗುರು ಮಚ್ಛೇಂದ್ರ ಕೊಟ್ಟ ಭಸ್ಮದಿ ಭುಯಿಯೋಳ ಬೆಳೆದವನೆ
ಓಂ ಜಯ ಗೋರಖನೆ

ಬದ್ರಿಕಾಶ್ರಮದಿ ತಪಗೈದು ದತ್ತನ ಕೃಪೆ ಪಡೆದು
ಶ್ರೀ ಶಂಕರನೊಲಿಸಿದವಗೇ ಮಣ್ಣಿನ ಗೊಂಬೆಗೆ
ಜೀವ ತುಂಬಿದ, ಓಂ ಜಯ ಗೋರಖನೆ

ಧರೆಯೋಳು ಗೋರಟ ಗ್ರಾಮದಿ ಲಿಂಗರೂಪದಿ
ಗೋರಕ್ಷನ ನಾಮದಲಿ ಗೋರಟ ವಿರೂಪಾಕ್ಷನಿಗೆ
ಕೃಪೆಯನು ತೋರುತಲಿ, ಓಂ ಜಯ ಗೋರಖನೆ

ವಿವಿಧೆಡೆ ನಡೆದ ಸನ್ಮಾನ ಹಾಗೂ ದೊರೆತ ಪ್ರಶಸ್ತಿಗಳು

ವಿರೂಪಾಕ್ಷಯ್ಯನವರು ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಕೈಗೊಂಡ ಸಾಧನೆಗಾಗಿ ಕರ್ನಾಟಕ ಸರ್ಕಾರವು ೨೦೧೨-೧೩ ನೇ ಸಾಲಿನಲ್ಲಿ ಮಹತ್ವದ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಸತ್ಕರಿಸಿದೆ.

ಇದಲ್ಲದೆ ಇವರಿಗೆ ಬೀದರ್ ಜಿಲ್ಲೆ ಹಾಗೂ ನಾಡಿನ ವಿವಿಧ ಸಂಘ, ಸಂಸ್ಥೆ, ಮಠ, ಪೀಠಗಳಿಂದ ವಿಶೇಷ ಸನ್ಮಾನಗೈಯಲಾಗಿದೆ. ಬೀದರ್ ಜಿಲ್ಲಾಡಳಿತ ಹಾಗೂ ಬಸವಕಲ್ಯಾಣ ತಾಲ್ಲೂಕು ಆಡಳಿತದಿಂದ ಪುರಸ್ಕಾರ ನೀಡಲಾಗಿದೆ.

ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದಕರು, ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ಒಳಗೊಂಡು ಪಂಚ ಪೀಠಾಧೀಶರು, ಭಾಲ್ಕಿಯ ಡಾ.ಬಸವಲಿಂಗ ಪಟ್ಟದ್ದೇವರು, ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ

ಶಿವಾಚಾರ್ಯರು, ಹಾರಕೂಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ತಡೋಳಾ ರಾಜೇಶ್ವರ ಶಿವಾಚಾರ್ಯರು, ಹುಲಸೂರ ಡಾ.ಶಿವಾನಂದ ಸ್ವಾಮೀಜಿ, ಬೇಲೂರ ಉರಿಲಿಂಗಪೆದ್ದಿ ಮಠ ಅಧಿಪತಿ ಪಂಚಾಕ್ಷರಿ ಸ್ವಾಮೀಜಿ, ಮುಚಳಂಬ ನಾಗಭೂಷಣ ಶಿವಯೋಗಿ ಸಂಸ್ಥಾನದ ಪ್ರಣವಾನಂದ ಸ್ವಾಮೀಜಿ ಮುಂತಾದವರು ಇವರನ್ನು ಮಠಕ್ಕೆ ಆಹ್ವಾನಿಸಿ ಸನ್ಮಾನಿಸಿದ್ದಾರೆ.

ಇವರಿಗೆ 'ಶ್ರೀರುದ್ರ ಸಂಗೀತಾಚಾರ್ಯ' 'ಸಂಗೀತ ರುದ್ರಭೂಷಣ' 'ಶರಣ ಉರಿಲಿಂಗಪೆದ್ದಿ ಪ್ರಶಸ್ತಿ' 'ಸಂಗೀತ ರುದ್ರ ಸಂಪದ, 'ಪುರಾಣರತ್ನ' ಮುಂತಾದ ಪ್ರಶಸ್ತಿಗಳು ಸಂದಿವೆ.

ವಿರೂಪಾಕ್ಷಯ್ಯನವರ ಕುರಿತು ವಿವಿಧ ಕ್ಷೇತ್ರದ ಸಾಧಕರ ಅಭಿಪ್ರಾಯಗಳು

೧) ವಿರೂಪಾಕ್ಷಯ್ಯನವರ ಬದುಕು ದಾರಿದೀಪ

ಸಜ್ಜನಿಕೆಯ ಸಾಕಾರಮೂರ್ತಿಯಾದ, ಅತ್ಯಂತ ಸರಳ ಜೀವನ ನಡೆಸುವ ವಿರೂಪಾಕ್ಷಯ್ಯನವರ ಬದುಕು ಇತರರಿಗೆ ದಾರಿದೀಪವಾಗಿದೆ. ಇವರು ಸಂಗೀತಗಾರರು, ನಾಟಕಕಾರರು, ಜಾನಪದ ಕಲಾವಿದ ಆಗಿದ್ದು ಈ ಕಲೆಯನ್ನು ಎಷ್ಟು ಪ್ರೀತಿಸುತ್ತಾರೋ ಅಷ್ಟೇ ಶ್ರದ್ಧೆಯಿಂದ ಪೂಜಾ ಕಾರ್ಯಗಳನ್ನು ಕೂಡ ನಿಯಮಿತವಾಗಿ ಕೈಗೊಳ್ಳುತ್ತಾರೆ. ನೂರಾರು ಮನೆ, ಮಠಗಳಲ್ಲಿ ಹಾಗೂ ನಮ್ಮ ತ್ರಿಪುರಾಂತದ ಗವಿಮಠದಲ್ಲಿಯೂ ಇವರು ರುದ್ರಪೂಜಾ ಸೇವೆ ಕೈಗೊಂಡಿದ್ದರು. ಇವರ ಈ ಪೂಜಾ ಕಾರ್ಯ ವೀಕ್ಷಿಸುವವರ ಮನದಲ್ಲಿ ಭಕ್ತಿ, ಶ್ರದ್ಧೆ ಹೆಚ್ಚುತ್ತದೆ. ನೂರರ ಹೊಸ್ತಿಲಲ್ಲಿನ ವಿರೂಪಾಕ್ಷಯ್ಯನವರು ಇನ್ನೂ ಹೆಚ್ಚುಕಾಲ ಬಾಳಲಿ ಎಂಬುದು ನಮ್ಮ ಸದೀಚ್ಛೆಯಾಗಿದೆ.

–ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು,
ಗವಿಮಠ ತ್ರಿಪುರಾಂತ

೨) ವಿರೂಪಾಕ್ಷಯ್ಯನವರ ಸಂಗೀತ ಕೇಳಿ ಪುಳಕಿತನಾದೆ

ಬಸವಕಲ್ಯಾಣ ತಾಲ್ಲೂಕಿನ ಬೇಲೂರನಲ್ಲಿ ನಡೆದ ಉರಿಲಿಂಗಪೆದ್ದಿ ಉತ್ಸವದಲ್ಲಿ ವಿರೂಪಾಕ್ಷಯ್ಯನವರಿಗೆ 'ಶರಣ ಉರಿಲಿಂಗಪೆದ್ದಿ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು. ಆಗ ಅವರು ಮಧುರ ಕಂಠದಿಂದ ಜಾನಪದಗೀತೆ ಹಾಗೂ ವಚನಗಳನ್ನು ಹಾಡಿದರು. ಇದಲ್ಲದೆ ಗ್ರಾಮದ ಸುಭಾಷ ಪಾಟೀಲ ಅವರ ಮನೆಯಲ್ಲಿ ಇವರ ರುದ್ರಪೂಜೆ ನಡೆದಿದ್ದನ್ನು ಕೂಡ ನಾನು ಕಣ್ಣಾರೆ ಕಂಡು ಧನ್ಯನಾಗಿದ್ದೇನೆ. ಇಂಥ ಅತ್ಯುತ್ತಮ ಸಂಗೀತಗಾರರಿಗೆ ಕರ್ನಾಟಕ ಸರ್ಕಾರ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಸನ್ಮಾನಿಸಿರುವುದು ಹೆಮ್ಮೆಯ ಸಂಗತಿ. ಇದರಿಂದ ಈ ಭಾಗದ ಸಂಗೀತಗಾರರಿಗೆ, ಜಾನಪದ ಕಲಾವಿದರಿಗೆ ಪ್ರೇರಣೆ ದೊರೆತಿದೆ.

–ವೀರಶೆಟ್ಟಿ ವೈಜನಾಥಪ್ಪ ಮಲಶೆಟ್ಟಿ

ಜಾನಪದಕಲಾವಿದರು, ಪತ್ರಕರ್ತರು ಬೇಲೂರ

೩) ನಾಟಕ ಕಲಿಸಿದ ಗುರು ವಿರೂಪಾಕ್ಷಯ್ಯನವರು

ವಿರೂಪಾಕ್ಷಯ್ಯ ಶಿವಲಿಂಗಯ್ಯ ಹಾಗೂ ವಿರೂಪಾಕ್ಷಯ್ಯ ಸಿದ್ರಾಮಯ್ಯನವರು ಗೋರಟಾದ ಹಾಗೂ ಸುತ್ತಲಿನ ಗ್ರಾಮಗಳ ಅನೇಕರಿಗೆ ಸಂಗೀತ, ನಾಟಕ ಕಲಿಸಿದ ಗುರುಗಳು ಆಗಿದ್ದಾರೆ. ಯುವಕನಿದ್ದಾಗ ನನಗೂ ಸಂಗೀತ ಕಲಿಯುವ ಹಾಗೂ ನಾಟಕವಾಡುವ ಗೀಳು ಹತ್ತಿಕೊಂಡಿತ್ತು. ನನ್ನ ತಂದೆ ಲಿಂಗಶೆಟ್ಟೆಪ್ಪ ಪಾಟೀಲ ಕೂಡ ನಾಟಕದಲ್ಲಿ ಆಸಕ್ತಿ ಹೊಂದಿದ್ದರು. ನಾನೂ ಈ ಇರ್ವರ ಹತ್ತಿರ ಸಂಗೀತ ಕಲಿತಿದ್ದೇನೆ. ಇವರ ನಿರ್ದೇಶನದಲ್ಲಿ ನಡೆದ 'ಪುತ್ಥಳಿ' ಹಾಗೂ 'ರವೇದ್ ಉಂಡಿ' ನಾಟಕಗಳಲ್ಲಿ ವಿಜಯ ಮತ್ತು ಶಾಮರಾವ್ ನ ಪಾತ್ರ ನಿರ್ವಹಿಸಿದ್ದೇನೆ. ದೇವಸ್ಥಾನಗಳಲ್ಲಿ, ಮನೆಗಳ ವಿಶೇಷ ಕಾರ್ಯಕ್ರಮಗಳಲ್ಲಿ ಭಜನೆಯ ಹಾಡು, ಜಾನಪದಗೀತೆ ಹಾಡಿದ್ದೇನೆ.

–ಪ್ರಭುಶೆಟ್ಟೆಪ್ಪ ಲಿಂಗಶೆಟ್ಟೆಪ್ಪ ಪಾಟೀಲ,

ಹೊನ್ನಳ್ಳಿ, ತಾ.ಭಾಲ್ಕಿ,

೪) ಅಲ್ಪ ಶಿಕ್ಷಣ ಪಡೆದು ಉತ್ತಮ ಸಾಧನೆ

ವಿರೂಪಾಕ್ಷಯ್ಯನವರು ಕೇವಲ ೪ ನೇ ತರಗತಿವರೆಗೆ ಶಿಕ್ಷಣ ಪಡೆದಿದ್ದರೂ ಉತ್ತಮ ಸಾಹಿತ್ಯ ರಚಿಸಿದ್ದಾರೆ. ಇದರ ಹಿಂದೆ ಅವರ ಕಠಿಣ ಪರಿಶ್ರಮ ಅಡಗಿದೆ. ಭಾಷೆ, ಸಾಹಿತ್ಯದ ಆಳವಾದ ಅಧ್ಯಯನ ನಡೆಸಿ ಇವರು ಅಮೂಲ್ಯ ಗ್ರಂಥಗಳನ್ನು ರಚಿಸಿದ್ದು ಇವು ಹೊಸ ಪೀಳಿಗೆಗೆ ಮಾರ್ಗದರ್ಶನ ನೀಡುವಂಥದ್ದಾಗಿವೆ. ಈ ಭಾಗದಲ್ಲಿ ಕಾವ್ಯ ಹಾಗೂ ಸಾಹಿತ್ಯದ ಇತರೆ ಪ್ರಕಾರದಲ್ಲಿ ಹೆಚ್ಚಿನ ಕೃಷಿ ನಡೆದಿದೆ. ಆದರೆ, ಪುರಾಣ, ನಾಟಕಗಳನ್ನು ಬರೆದ ಬೆರಳೆಣಿಕೆಯ ಸಾಹಿತಿಗಳಲ್ಲಿ ಇವರೊಬ್ಬರಾಗಿದ್ದಾರೆ. ಸಂಗೀತದ ಸಾಧನೆಯೊಂದಿಗೆ ಸಾಹಿತ್ಯದಲ್ಲಿಯೂ ಮಹತ್ವದನ್ನು ಸಾಧಿಸಿರುವ ಅಪರೂಪದ ವ್ಯಕ್ತಿ. ಬಹುಮುಖ ಪ್ರತಿಭೆಯುಳ್ಳವರು.

–ಚನ್ನಬಸಪ್ಪ ಶೆಟ್ಟೆಪ್ಪ ಗೌರ

ಉಪನ್ಯಾಸಕ, ಬಸವಕಲ್ಯಾಣ

೫) ೯೩ ನೇ ವಯಸ್ಸಿನಲ್ಲೂ ಕನ್ನಡಕ ಇಲ್ಲ

ವಿರೂಪಾಕ್ಷಯ್ಯನವರು ನನ್ನ ಮಾವನವರಾಗಿದ್ದಾರೆ. ಅನೇಕ ದಿನಗಳಿಂದ ಬಸವಕಲ್ಯಾಣದ ನನ್ನ ಮನೆಯಲ್ಲಿಯೇ ವಾಸಿಸುತ್ತಾರೆ. ಇವರ ಸಾಧನೆಯ ಬಗ್ಗೆ ಇವರ ಮಗಳಾಗಿರುವ ನನ್ನ ಪತ್ನಿ ಮಹಾನಂದಾ ಹಾಗೂ ನನಗೆ ಹೆಮ್ಮೆಯಿದೆ. ಆದ್ದರಿಂದಲೇ ಅವರು ನಡೆಸುವ ರುದ್ರಪೂಜೆಯಲ್ಲಿ ನಾನೂ ಭಾಗವಹಿಸಿದ್ದೇನೆ. ಅವರು ರಚಿಸಿದ 'ಭಕ್ತಿ ಕುಸುಮಾಂಜಲಿ' ಗ್ರಂಥದ ಪ್ರಕಟಣೆಗೆ ಧನಸಹಾಯ ಒದಗಿಸಿದ್ದೇನೆ. ಇವರು ಪ್ರತಿದಿನ ಬೆಳಗಿನಜಾವ ಏಳುತ್ತಾರೆ. ತಾಸು ಎರಡುತಾಸು ಯೋಗಾಸನ ಮಾಡುತ್ತಾರೆ. ನಂತರ ಸ್ನಾನ, ಪೂಜೆ, ನಿಯಮದಂತೆ ನಡೆಯುತ್ತದೆ. ಹೆಚ್ಚು ಉಪ್ಪು, ಖಾರ, ಹುಳಿ ಇಲ್ಲದ ಸಾತ್ವಿಕ ಆಹಾರ ಸೇವಿಸುತ್ತಾರೆ. ಈಗಲೂ ಅವರ ಹಲ್ಲುಗಳು ಕಡಲೆ ತಿನ್ನುವಷ್ಟು ಗಟ್ಟಿಯಾಗಿವೆ. ಕನ್ನಡಕ ಇಲ್ಲದೆಯೇ ಓದುತ್ತಾರೆ. ಬರೆಯುತ್ತಾರೆ.

–ಶಿವಕುಮಾರ ಮಠ,

ನಿವೃತ್ತ ಸೈನಿಕ, ಬಸವಕಲ್ಯಾಣ

ಆಧಾರ ಗ್ರಂಥಗಳು

೧. ಹಂಪಿ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೮ ಬೀದರ್ ಜಿಲ್ಲೆ, ಲೇ–ಹನೂಮಾಕ್ಷಿ ಗೋಗಿ

೨. ಮಿನುಗು ನಕ್ಷತ್ರಗಳು: ಲೇ–ಪಂಚಾಕ್ಷರಿ ಹಿರೇಮಠ ಬಸವಕಲ್ಯಾಣ

೩. ದ ಎಂಡ್ ಆಪ್ ಆನ್ ಎರಾ: ಲೇ– ಕೆ.ಎಂ.ಮುನ್ಶಿ

೪. ಕರ್ನಾಟಕ ಚರಿತ್ರೆ (೧೯೯೭): ಲೇ– ಬಿ.ಷೇಕ್ ಅಲಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೫. ಡಿಫೆನ್ಸ್ ಅರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ (೧೯೮೫) ಲೇ– ಎಸ.ಕೆ.ಜೋಶಿ, ಸಂದೀಪ ಪ್ರಕಾಶನ ದೆಹಲಿ,

೬. ಹೈದರಾಬಾದ್ ಕರ್ನಾಟಕದ ಜಲಿಯನವಾಲಾಬಾಗ ಹತ್ಯಾಕಾಂಡ ಗೋರಟಾ: ಲೇ– ವಿರೂಪಾಕ್ಷಯ್ಯ ಮಠಪತಿ

೭. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರಿನ ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ

=O=O=

ಮದುವೆಯ
ಹಾರ್ದಿಕ
ಶುಭಾಷಯಗಳು

ಡಾ. ರುದ್ರಮಣಿ
ಜೊತೆ
ಕೀರ್ತಿ (ಮಹೇಶ್ವರಿ)



ಪುಸ್ತಕ ದಾಸೋಹಿಗಳು

ಶ್ರೀಮತಿ ವಿಮಲಾಬಾಯಿ ಶ್ರೀ ವಿಶ್ವನಾಥಯ್ಯ ಮಠಪತಿ

ಸರಳ ಸಜ್ಜನಿಕೆಗೆ ಹೆಸರಾದ ಶ್ರೀ ವಿಶ್ವನಾಥಯ್ಯ ಮಠಪತಿ ಯವರದ್ದು ಅಪರೂಪದ ವ್ಯಕ್ತಿತ್ವ. ಬಸವಾದಿ ಶರಣರ ಸತ್ಯಶುದ್ಧ ಕಾಯಕ ನಿಷ್ಠೆ, ದಾಸೋಹ ಭಾವದಲ್ಲಿ ನಂಬಿಕೆ ಇಟ್ಟವರು, ವೃತ್ತಿಯಿಂದ ಅಧೀಕ್ಷಕರಾಗಿದ್ದರೂ. ಪ್ರವೃತ್ತಿಯಿಂದ ಸಾಹಿತಿಗಳು, ಹರಿಹರ ಮಹತ್ವ ಮೊದಲಾದ ಮಹತ್ವದ ಕೃತಿಗಳ ಸಂಪಾದಕರಾಗಿ, ಇವರು ಸಮಾಜ ಸೇವೆಗೆ ಹೇಸರಾದವರು. ಮಾನವೀಯ ಸಂವೇದನೆಯುಳ್ಳ ದಯೇ, ಅಂತಃ ಕರಣ ಇವರ ಬದುಕಿನ ಅಂತಃಶಕ್ತಿಯಾಗಿದ್ದು ಸಾಮಜಿಕ ಕಳಕಳಿ ಹೊಂದಿರುವರು. ಇವರ ಬದುಕು ಹಸನಾಗಲೇಂದು ಶುಭಹಾರೈಸೋಣ...



ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ. ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು. ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ. ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ 'ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ 'ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ. ಅದರ ಭಾಗವಾಗಿ ಪತ್ರಕರ್ತರು, ಸಾಹಿತಿಗಳಾದ ಮಾಣಿಕ ಭುರೆ ಅವರು ಬರೆದ ಕಲಾಶ್ರೀ ವೀರೂಪಾಕ್ಷಯ್ಯಾ ಗೋರಟಾ ಜೀವನ ಸಾದನೆ ಯೆಂಬ ಪುಸ್ತಕ ಪ್ರಕಟವಾಗುತ್ತಿರುವುದು, ಅಭಿಮಾನದ ಸಂಗತಿ ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು